ಶ್ರೀ ಕೋಟಾ ಶ್ರೀನಿವಾಸ ಪೂಜಾರಿ [ಮುಜರಾಯಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಸಚಿವರು] :– ಮಾನ್ಯ ಅಧ್ಯಕ್ಷರೆ, ಶ್ರೀ ಮಲ್ಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2013 ಅನ್ನು ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ಶ್ರೀ ಮಲ್ಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2013 ಅನ್ನು ಈ ಸಭೆಯು ಅಂಗೀಕರಿಸುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)

(ಅನುಬಂಧ–11)

2. 'ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕ, 2013

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಟಿ.ರವಿ [ಉನ್ನತ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು :– Explain ಮಾಡಿ.

ಶ್ರೀ ಸಿ.ಟಿ.ರವಿ [ಉನ್ನತ ಶಿಕ್ಷಣ ಸಚಿವರು]: ಉನ್ನತ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಬೇಕೆನ್ನುವುದು ರಾಜ್ಯ ಸರ್ಕಾರದ ಅಭಿಪ್ರಾಯ. ಪ್ರಸ್ತುತ ರಾಜ್ಯದಲ್ಲಿರುವ Gross Enrolment Ratio 18% ಇದೆ. 2020ನೇ ಸಾಲಿಗೆ ಅದು 30%ಗೆ ಏರಿಸಬೇಕು.

Knowledge Commission ದೇಶದಲ್ಲಿ 1500ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ ಎಂದು ಹೇಳಿದೆ. ಗ್ಲೋಬಲ್ ರಿಪೋರ್ಟ್ ತೆಗೆದುಕೊಂಡರೆ, ಅಮೆರಿಕದಲ್ಲಿ ಸರಾಸರಿ G.E.R. 75% ಇದೆ, ಜಪಾನ್ ನಲ್ಲಿ 83% ಇದೆ. ಹಾಗಾಗಿ ನಮ್ಮ ಖಾಸಗಿಯವರಿಗೂ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಉತ್ತೇಜನ ಕೊಡಬೇಕು, ಸಹಭಾಗಿತ್ವ ಕೊಡಬೇಕು, ಅದರ ಮೂಲಕ ಬಂಡವಾಳ ಮತ್ತು ಕ್ವಾಲಿಟಿ ಎಜುಕೇಷನ್ ಹರಿದು ಬರಬೇಕೆನ್ನುವ ದೃಷ್ಟಿಯಲ್ಲಿ ಯೋಚನೆ ಮಾಡಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಈ ರೀತಿ ರಾಜಸ್ಥಾನದಲ್ಲಿ ಖಾಸಗಿ 33 ವಿಶ್ವವಿದ್ಯಾಲಯಗಳು, ಉತ್ತರ ಪ್ರದೇಶದಲ್ಲಿ 17, ಹಿಮಾಚಲ ಪ್ರದೇಶದಲ್ಲಿ 15, ವೈಜಾಕ್‌ನಲ್ಲಿ 13, ಹೀಗೆ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಟ್ಟಿದೆ. ಈಗ ನಾವು ಕೆಲವೊಂದು ನಿಬಂಧನೆಗಳೊಂದಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಅವರು ಪ್ರಾರಂಭ ಮಾಡಬೇಕೆಂದರೆ 25 ಎಕರೆ ಲ್ಯಾಂಡ್ ಜಾಗವಿರಬೇಕು, ಬಿಬಿಎಂಪಿ ಹೊರಗಡೆಯಾದರ 40 ಎಕರೆ compact land ಇರಬೇಕು, ಇತರೆ ಪ್ರದೇಶದಲ್ಲಾದರೆ 60 ಎಕರೆ compact land ಇರಬೇಕು. ಹಾಗೆ ರಾಜ್ಯದ ವಿದ್ಯಾರ್ಥಿಗಳಿಗೆ 40% ಸೀಟನ್ನು ಮೀಸಲಿಡಬೇಕು. ಆ 40% ಸೀಟುಗಳನ್ನು ರಾಜ್ಯ ಸರ್ಕಾರ ಸೂಚಿಸಿರುವ ಮೆರಿಟ್ ಮತ್ತು ರೊಟೇಷನ್ ಆಧಾರದಲ್ಲಿ ಮೀಸಲಾತಿಯ ಆಧಾರದಲ್ಲಿ ಭರ್ತಿ ಮಾಡಬೇಕು, 14 ರಾಜ್ಯಗಳದ್ದನ್ನು ನಾನು ಅಧ್ಯಯನ ಮಾಡಿದ್ದೇನೆ. 14 ರಾಜ್ಯಗಳಲ್ಲಿ ಅತಿ ಹೆಚ್ಚು 15% ಮೀಸಲಾತಿ ಕೆಲವು ರಾಜ್ಯಗಳಲ್ಲಿದೆ, ಕೆಲವು ರಾಜ್ಯಗಳಲ್ಲಿ ಮೀಸಲಾತಿಯೇ ಇಲ್ಲ. ಆದರೆ ನಾವು 40% ಮೀಸಲಾತಿಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. Board of Gevernance ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳ ಕಾರ್ಯದರ್ಶಿಗಳು ಸದಸ್ಯರಾಗಿರಬೇಕು. ಸರ್ಕಾರದಿಂದ ನಾಮ ನಿರ್ದೇಶನ ಹೊಂದಿರುವ ಒಬ್ಬರು ಆಡಳಿತ, ಆರ್ಥಿಕ ಇತ್ಯಾದಿ ಕ್ಷೇತ್ರಗಳ ಪರಿಣಿತರು ಒಬ್ಬರು ನಾಮನಿರ್ದೇಶಿತರಿರಬೇಕು, ಯುಜಿಸಿಯಿಂದ ಒಬ್ಬ ನಾಮನಿರ್ದೇಶಿತ ಸದಸ್ಯರಿರಬೇಕೆಂದು Board of Gevernance ಸರ್ಕಾರದ ಕಡೆಯಿಂದ ಸೇರಿಸಿದ್ದೇವೆ. ಇನ್ನು Endowment Fund ಶಾಶ್ವತ ಶಾಸನಬದ್ಧ ನಿಧಿ, ಬೆಂಗಳೂರು ಜಿಲ್ಲೆಯಾದರೆ ರೂ. 15 ಕೋಟಿ. Cash 10 ಕೋಟಿ ಬ್ಯಾಂಕ್ ಗ್ಯಾರಂಟಿ. ಬೇರೆ ರಾಜ್ಯಗಳಲ್ಲಿ 2 ಕೋಟಿ, 3 ಕೋಟಿ. Maximum 5 ಕೋಟಿ ಇದೆ ನಮ್ಮಲ್ಲಿ ಬ್ಯಾಂಕ್ ಗ್ಯಾರಂಟಿ ಸೇರಿ ಬೆಂಗಳೂರು ಜಿಲ್ಲೆಯದು 25 ಕೋಟಿಯಾದರೆ, ಇತರೆ ಗ್ರಾಮಾಂತರ ಪ್ರದೇಶದಲ್ಲಿ, ಇತರೆ ಜಿಲ್ಲೆಗಳಲ್ಲಾದರೆ 10

ಕೋಟಿ cash, 5 ಕೋಟಿ ಬ್ಯಾಂಕ್ ಗ್ಯಾರಂಟಿ. ಶುಲ್ಕ ನಿಯಂತ್ರಣಕ್ಕೆ ಬೇರೆ ರಾಜ್ಯಗಳಲ್ಲಿ Board of Gevernance ಕೊಟ್ಟಿದ್ದಾರೆ, ನಾವು ಶುಲ್ಕ ನಿಯಂತ್ರಣಕ್ಕೆ ನಿವೃತ್ತ ಹೈಕೋರ್ಟ್ ಅಥವಾ ಸುಪ್ರಿಂ ಕೋರ್ಟ್ ಜಡ್ಜ್ ನೇತೃತ್ವದ ಸಮಿತಿ ವಾಸ್ತವಿಕ ವೆಚ್ಚವನ್ನು ಆಧರಿಸಿ ಫೀ ಫಿಕ್ಸ್ ಮಾಡಬೇಕೆಂದು ಒಂದು ಸಮಿತಿಯನ್ನು ಮಾಡಿದ್ದೇವೆ. ಇದರಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳ ಜೊತೆಗೆ ಸರ್ಕಾರದ ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿಗಳು ಶುಲ್ಕ ನಿಯಂತ್ರಣ ಸಮಿತಿಯಲ್ಲಿರುತ್ತಾರೆ. ಸೆಕ್ಷನ್ 56ರಲ್ಲಿ ಏನಾದರೂ irregularities ನಡೆದರೆ ಅವರಿಗೆ 10 ಲಕ್ಷ ರೂಪಾಯಿಗಳವರೆಗೆ ದಂಡ, 2 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸತಕ್ಕಂಥ, de-recognize ಮಾಡುವ ಒಂದು ಪ್ರಸ್ತಾವನೆಯನ್ನು ಈ ವಿಧೇಯಕದಲ್ಲಿ ಮಾಡಿದ್ದೇವೆ. ಇದರ ಜೊತೆಗೆ ಇವರು affiliation ಮಾಡುವಂತಿಲ್ಲ. ಹಾಗಾಗಿ ನಮ್ಮ ಸರ್ಕಾರದ ವಿಶ್ವವಿದ್ಯಾಲಯಗಳಿಗೆ ಯಾವುದೇ ಬಾಧಕವಾಗುವುದಿಲ್ಲ, ಹೊಸದಾಗಿ affiliation ಮಾಡುವಂತಿಲ್ಲ. ಇವರದೇ ಆದಂತಹ own management, ಸಂಯೋಜಿತ ಕಾಲೇಜುಗಳನ್ನು 5 ವರ್ಷಗಳ ನಂತರ ಹೊಂದಬಹುದು, 5 ವರ್ಷಗಳವರೆಗೆ ಅವರ Constituent ಕಾಲೇಜುಗಳನ್ನು ಹೊಂದುವುದಕ್ಕೂ ಅವಕಾಶವಿಲ್ಲ. 5 ವರ್ಷಗಳವರೆಗೆ ಚೆನ್ನಾಗಿ ವಿಶ್ವವಿದ್ಯಾಲಯ ನಡೆದರೆ, 5 ವರ್ಷದ ನಂತರ ಹೊಸ ಸಂಯೋಜಿತ ಕಾಲೇಜುಗಳನ್ನು ಅವರು ಬೇರೆ ಬೇರೆ ಕಡೆ ರಾಜ್ಯದಲ್ಲಿ ತೆರೆಯುವುದಕ್ಕೆ ಅವಕಾಶವಿದೆ, ಅಲ್ಲಿಯವರೆಗೆ ತೆರೆಯುವುದಕ್ಕೆ ಅವಕಾಶವಿಲ್ಲ. ರಾಜ್ಯಪಾಲರು Visitor ಆಗಿರುತ್ತಾರೆ. ಉನ್ನತ ಶಿಕ್ಷಣ ಸಚಿವರು ಪ್ರೋ. ಛಾನ್ಸಲರ್ Pro-Visitor ಆಗಿರುತ್ತಾರೆ. ಹಾಗಾಗಿ ಈ ಎಲ್ಲಾ ನಿಬಂಧನೆಗಳನ್ನು ಹಾಕಿ ಸಾಮಾಜಿಕ ನ್ಯಾಯವನ್ನು ಕಾಪಾಡಿಕೊಂಡು ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಒಂದು ಖಾಸಗಿ ವಿಶ್ವವಿದ್ಯಾಲಯದ ವಿಧೇಯಕವನ್ನು ಮಂಡಿಸಿದ್ದೇವೆ, ವಿಧಾನ ಪರಿಷತ್ತಿನಲ್ಲಿ ಮೂರುಕಾಲು ಗಂಟೆ ಚರ್ಚೆ ನಡೆದು, ಹಿರಿಯರ ಮನೆಯಲ್ಲಿ ಇದಕ್ಕಿಂತ ಜಾಸ್ತಿ ವಿವರವಾದ ಚರ್ಚೆ ನಡೆದು ಅವರೆಲ್ಲಾ ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿ ಅಲ್ಲಿಂದ ಅಂಗೀಕೃತ ರೂಪದಲ್ಲಿ ಬಂದಿರುವ ಮಸೂದೆ ಇದು. ಹಾಗಾಗಿ ಉತ್ತಮವಾಗಿರುವ ತಿದ್ದುಪಡಿಯನ್ನು ಒಳಗೊಂಡಿರುವ, ರಾಜ್ಯದ ಹಿತವನ್ನು ಕಾಪಾಡಿಕೊಂಡು ಈ ಒಂದು ವಿಶ್ವವಿದ್ಯಾಲಯಕ್ಕೆ ಅನುಮತಿ ಕೊಡಬೇಕು. ಈ ಒಂದು ಸಿಎಂಆರ್ ಸಂಸ್ಥೆ 21 ವರ್ಷದಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದೆ, ಎಲ್‌ಕೆಜಿಯಿಂದ ಡಿಗ್ರಿ ಕಾಲೇಜಿನವರೆಗೆ, ಮ್ಯಾನೇಜ್‌ಮೆಂಟ್

ಕೋರ್ಸಿನವರೆಗೂ ಈ ಸಿಎಂಆರ್ ಸಂಸ್ಥೆ ಸುಮಾರು 22 ಸಂಸ್ಥೆಗಳನ್ನು ನಡೆಸುತ್ತಿದೆ. ಅವರು 47 ಎಕರೆ ಒಂದು compact land ಹೊಂದಿದ್ದಾರೆ, ಹಾಗಾಗಿ ಈ ವಿಶ್ವವಿದ್ಯಾಲಯಕ್ಕೆ ಅನುಮತಿ ಕೊಡಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪೂರ್ [ಬೀದರ್] : ಸನ್ಮಾನ್ಯ ಮಂತ್ರಿಗಳು ಬಹಳ ವಿಸ್ತಾರವಾಗಿ private Universities ಬಗ್ಗೆ ಹೇಳಿದರು. ಈಗಾಗಲೇ ಇದರ ಮೇಲೆ ಬಹಳಷ್ಟು ಚರ್ಚೆಯಾಗಿದೆ. ಎಲ್ಲೋ ಒಂದು ಕಡೆ ಹಿಂದೆಯೂ ಈ ವಿಧೇಯಕ ಬಂದಾಗ ಕೆಲವು ಸಚಿವರೇ ಅದರ ಅಧ್ಯಕ್ಷರು ಎಂದಾಗ ಎಲ್ಲರೂ objection ಮಾಡಿದಾಗ ಅದನ್ನು ತಿದ್ದುಪಡಿ ಮಾಡಿದ್ದಾರೆ. ಏನಾಗಿದೆ ಎಂದರೆ ನಿವೃತ್ತ ನ್ಯಾಯಾಧೀಶರು fee structure ಅನ್ನು ನಿರ್ಧಾರ ಮಾಡುತ್ತಾರೆಂದು ಇವರು ಹೇಳಿದರು, ಆದರೆ ಇವತ್ತು private schools ನಾವು ನಿಯಂತ್ರಣ ಮಾಡುವುದಕ್ಕಾಗುತ್ತಿಲ್ಲ. ಇಡೀ ರಾಜ್ಯದಲ್ಲಿ ಬಹಳಷ್ಟು ಸಂಕಷ್ಟವಿದೆ. ಅಂಥದ್ದರಲ್ಲಿ ಇವತ್ತು ಯೂನಿವರ್ಸಿಟಿ level ನಲ್ಲಿ, ಕಾಲೇಜ್ ಲೆವಲ್‌ನಲ್ಲಿ ಯಾವ ರೀತಿ ನಿಯಂತ್ರಣ ಮಾಡಬೇಕು ಮತ್ತು ಇಷ್ಟು ತರಾತುರಿಯಲ್ಲಿ ಇಷ್ಟೊಂದು ಯೂನಿವರ್ಸಿಟಿಗಳು, ಈಗ ಸಚಿವರು 40 ಎಕರೆ ಜಮೀನು ಹೊಂದಿರಬೇಕೆಂದು ಹೇಳಿದರು. Foreign system ನಲ್ಲಿ ಒಂದು ಮನೆಗೂ ಒಂದು ಯೂನಿವರ್ಸಿಟಿಯನ್ನು ಕೊಟ್ಟಿದ್ದಾರೆ, ಆ ರೀತಿ ಮುಂದಿನ ದಿನಗಳಲ್ಲಿ ಪರಿಗಣಿಸಬಾರದು. ಅದಲ್ಲದೆ quality of infrastructure ಗೆ ನಾವು ಗಮನ ಹರಿಸಬೇಕಾಗುತ್ತದೆ. ಏಕೆಂದರೆ, ಸರ್ಕಾರದವರಲ್ಲದೆ ಖಾಸಗಿಯವರು ಬರಬೇಕಾದರೆ ಯಾವ ರೀತಿ MCI, DCI ಇವೆಲ್ಲಾ ಬೇರೆ ಸಂಸ್ಥೆಗಳಲ್ಲಿದ್ದಾವೆ, ಆ ರೀತಿಯಲ್ಲೂ ಮುಖ್ಯವಾಗಿ infrastructure ಅದರಲ್ಲೂ ಮುಖ್ಯವಾಗಿ fee structure ನಿಯಂತ್ರಣ ಮಾಡುವುದು, ಮೀಸಲಾತಿ, ಅವರಿಗೆ ಕೊಟ್ಟಂಥ ಪರ್ಸೆಂಟೇಜ್ ಅದರ ಮೇಲೆಲ್ಲಾ ಸರ್ಕಾರದವರ ನಿಯಂತ್ರಣವಿರಬೇಕು. ಇಷ್ಟು ತರಾತುರಿಯಲ್ಲಿ ಎಲ್ಲಾ ಕಾಲೇಜುಗಳು ಯೂನಿವರ್ಸಿಟಿಗಳು ಬರುತ್ತಿದ್ದಾವೆ, ಅದಕ್ಕೆ ಅಲ್ಲಿ ಮೂರುವರೆ ತಾಸು ಚರ್ಚೆಯಾಗಿದೆ. ಏಕೆಂದರೆ, ಬಹಳಷ್ಟು ಜನರಿಗೆ ಇದು ಅನಾನುಕೂಲವಾಗುವ ಸಂಕೇತಗಳಿವೆ. ಹಾಗಾಗಿ ರಾಜ್ಯ ಸರ್ಕಾರ ಎಲ್ಲೋ ಒಂದು ತರಾತುರಿಯಲ್ಲಿ ಇವತ್ತು ಅವಧಿ ಮುಗಿಯುವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಮಾಡಿ ಹೋಗಬೇಕು ಎನ್ನುವ ನಿಟ್ಟಿನಲ್ಲಿ ಎಲ್ಲೋ ಒಂದು ನಿರ್ಣಯವನ್ನು ಇವರು ತೆಗೆದುಕೊಳ್ಳುತ್ತಾರೆ ಅನಿಸುತ್ತಿದೆ. ಇಷ್ಟು ಬೇಗ ತರಾತುರಿಯಲ್ಲಿ ಏಕೆ ಹೋಗುತ್ತಿದ್ದಾರೆ ಇವರು ಎಂದು ಅರ್ಥವಾಗುತ್ತಿಲ್ಲ.

ಸಾಧಕ ಬಾಧಕಗಳು ಇನ್ನೂ ಯಾವೂದೂ ಲೆಕ್ಕ ಹಾಕದೆ, ಒಂದೇ ವರ್ಷದಲ್ಲಿ ಇಷ್ಟೊಂದು ಪ್ರೈವೇಟ್ ಯೂನಿವರ್ಸಿಟಿಗಳನ್ನು ಕೊಟ್ಟುಕೊಂಡು ಹೋದರೆ ಬಡವರ ಗತಿ ಏನು?

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರು ಈ ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಮೇಲ್ಮನೆಯಲ್ಲಿ ಚರ್ಚೆಯಾದ ನಂತರ ಇಲ್ಲಿ ತಂದಿದ್ದಾರೆ, ಕೆಲವು ವಿಷಯಗಳನ್ನು ಸ್ಪಷ್ಟಪಡಿಸಬೇಕು. ಉನ್ನತ ಶಿಕ್ಷಣದಲ್ಲಿ ಖಾಸಗಿ ಬಂಡವಾಳವನ್ನು ಹೂಡತಕ್ಕಂಥದ್ದು, ನಮ್ಮ ಬಂಡೆಪ್ಪ ಖಾಶೆಂಪೂರ್‌ರವರು ಒಂದು ಮಾತು ಹೇಳಿದರು. ಒಂದು ಭಯ ಬರುತ್ತದೆ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ರೀತಿಯ ಮೂಗುದಾರ ಹಾಕುವುದಕ್ಕೆ ಇವತ್ತು ಆಗುತ್ತಿಲ್ಲ. ಬಹಳ ಕಷ್ಟವಾಗಿದೆ. ಅವರು ಹೇಳಿದ ಹಾಗೆ ಲೋಯರ್ ಕೆ.ಜಿ. ಯಿಂದ ಉನ್ನತ ಶಿಕ್ಷಣದವರೆಗೂ ಇರುವಂತಹ ಶಿಕ್ಷಣ ಸಂಸ್ಥೆಗಳನ್ನು ಉಲ್ಲೇಖ ಮಾಡಿದರು. ದಯವಿಟ್ಟು ನಾವು ಎಚ್ಚರಿಕೆಯಿಂದ ಇರಬೇಕು. ಒಂದೇ ಸಾರಿ ಈ ರೀತಿಯಾಗಿ ಮಾಡುವುದರಿಂದ ಮುಂದಿನ ದಿನಗಳಲ್ಲಿ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಮುಚ್ಚತಕ್ಕಂತಹ ಹುನ್ನಾರ ಇದೆಯೇ ಎಂದು ನನಗೆ ಶಂಕೆ ಬರುತ್ತಿದೆ ಇದು ಒಂದು. ಎರಡೆನೆಯದು, ಇವತ್ತು ನನ್ನ ಕ್ಷೇತ್ರದಲ್ಲಿ ಕಮಲಾನಗರ ವಾರ್ಡ್ ನಂ. 74 ರಲ್ಲಿ ಒಂದು ಬೋರ್ಡ್ ನೋಡಿದೆ, CA site ನಲ್ಲಿ ಯಾವುದೋ ಒಂದು ಯೂನಿವರ್ಸಿಟಿ ಬೋರ್ಡ್ ಹಾಕಿಕೊಂಡು ಇಲ್ಲಿ BA, MBA, BCA ಎಲ್ಲಾ ಮಾಡುತ್ತೇವೆಂದು ಬೋರ್ಡ್ ಹಾಕಿದ್ದಾರೆ. ಅಲ್ಲಿ ಏನೂ infrastructure ಇಲ್ಲ. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಏನಿದು, ಯೂನಿವರ್ಸಿಟಿ ಬೋರ್ಡ್ ಹಾಕಿಕೊಂಡಿದ್ದಾರೆ, ಇಷ್ಟೆಲ್ಲಾ ಕೋರ್ಸ್‌ಗಳನ್ನು ಇಲ್ಲಿ ಮಾಡುತ್ತಾರೆ, ಬಹುಶಃ ಮುಂದಿನ ದಿನಗಳಲ್ಲಿ ನಮ್ಮ ಮಕ್ಕಳಿಗೆ ಡಿಗ್ರಿ ಸರ್ಟಿಫಿಕೇಟ್ ಕೊಡುತ್ತಾರೆ, Master degree ಮಾಡಬಹುದು, ಕೊನೆಗೆ certificate ಗಳೇ ಮಾರಾಟ ಆಗಿರತಕ್ಕಂತಹ ಹಗರಣಗಳು ಇವೆ. ದಯವಿಟ್ಟು ಮಾನ್ಯ ಉನ್ನತ ಶಿಕ್ಷಣ ಸಚಿವರು ಇದರ ಬಗ್ಗೆ ಎಚ್ಚರಿಕೆಯಿಂದ ಹೆಜ್ಜೆ ಇಡುವುದು ಸೂಕ್ತವೆಂದು ವಿನಂತಿ ಮಾಡುತ್ತೇನೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಸಾಮಾಜಿಕ ನ್ಯಾಯವನ್ನು ಕಾಪಾಡುತ್ತೇವೆಂದು ಹೇಳಿದರು. ನಮ್ಮ ಕರ್ನಾಟಕದಲ್ಲಿ ಕೊಟ್ಟಿರತಕ್ಕಂತಹ ಕೆಲವು ವಿಶ್ವವಿದ್ಯಾಲಯಗಳ ಉದಾಹರಣೆ ಹೇಳುತ್ತೇನೆ. ಅಲೈಯನ್ಸ್ ಎನ್ನತಕ್ಕಂತಹ ಸಂಸ್ಥೆಗೆ ನೀಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಎಷ್ಟು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕ ನ್ಯಾಯ ವಂಚಿತವಾಗಿದೆ ಎಂದು ತಾವು ಸ್ಪಷ್ಟಪಡಿಸಬೇಕು. ಎಷ್ಟು ಪರ್ಸೆಂಟೇಜ್ ಇಟ್ಟಿದ್ದೀರಿ, ಕರ್ನಾಟಕದ

ವಿದ್ಯಾರ್ಥಿಗಳಿಗೆ ಎಷ್ಟು ಪರ್ಸೆಂಟೇಜ್ ಇಟ್ಟಿದ್ದೀರಿ ಎಂದು ತಿಳಿಸಬೇಕು. ಇನ್ನೂ ಯಾವ್ಯಾವ ವಿಶ್ವವಿದ್ಯಾಲಯಗಳು ಇದರಿಂದ ವಂಚಿತವಾಗಿವೆ ಎಂದು ತಿಳಿಸಬೇಕು. Fee fixation committee ಬಗ್ಗೆ ತಾವು ಹೇಳಿದಿರಿ. Fee fixation ಬಹಳ ಮುಖ್ಯ. ಇದರ ಬಗ್ಗೆ ಉಳಿದಂತಹ ಯೂನಿವರ್ಸಿಟಿಗಳಲ್ಲಿ ಏಕೆ ಇದನ್ನು ಹೊರತುಪಡಿಸಿದ್ದೀರಿ? ಹಿಂದೆ ಇರಬಹುದು, ಈಗ ಇರಬಹುದು, ಈ ನಿರ್ಣಯದಲ್ಲಿಯೇ ಅವುಗಳನ್ನು ಭಾಗಿಗಳನ್ನಾಗಿ ಮಾಡಿದ್ದರೆ ಉತ್ತಮವಾಗಿತ್ತು. ಅಥವಾ ಮತ್ತೊಂದು ನಿರ್ಣಯ ತಂದರೆ ಒಳ್ಳೆಯದಿತ್ತು. ಅಲೈಯನ್ಸ್ ಇರಬಹುದು, ಅಜೀಂ ಪ್ರೇಂಜಿ ಬಗ್ಗೆ ಒಂದು ನಡೆಯುತ್ತಿದೆ, ಅದರ ಬಗ್ಗೆಯೂ ಸ್ಪಷ್ಟವಾಗಿ ತಿಳಿಸಬೇಕು. ಸಾಮಾಜಿಕ ನ್ಯಾಯವನ್ನು ಕಾಪಾಡುವ ದಿಕ್ಕಿನಲ್ಲಿ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಕರ್ನಾಟಕದ ಸ್ಥಳೀಯ ವಿದ್ಯಾರ್ಥಿಗಳಿಗೆ ವಂಚನೆ ಆಗಬಾರದು. ಅದನ್ನು ಕಾಪಾಡಿ. ವಿಶ್ವವಿದ್ಯಾಲಯಗಳಿಂದ ಲೈಸೆನ್ಸ್ ಲೂಟಿ ಆಗಬಾರದು. ಯಾವ ರೀತಿಯಿಂದಲೂ ಲೂಟಿಗೆ ಅವಕಾಶವಾಗಬಾರದು. ನೀವು ತರಾತುರಿಯಲ್ಲಿ ಮಾಡುವುದಕ್ಕೆ ಹೊರಟಿರುವುದು ದೂರದೃಷ್ಟಿಯಿಂದ ಎಷ್ಟರ ಮಟ್ಟಿಗೆ ಒಳಿತು ಎನ್ನುವುದನ್ನು ಮತ್ತೊಮ್ಮೆ ಪರಾಮರ್ಶೆ ಮಾಡಬೇಕು. ನಾನು ಕೇಳಿದಂತಹ ಮಾಹಿತಿಗಳಿಗೆ ಉತ್ತರ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಬಂಡೆಪ್ಪ ಖಾಶೆಂಪೂರ್‌ರವರು ನಿಯಂತ್ರಣದ ಬಗ್ಗೆ ಹೇಳಿದರು. ನಿಯಂತ್ರಣಕ್ಕೋಸ್ಕರ UGC, AICTE ಮತ್ತು MCI ಅನುಮತಿ ಪಡೆಯುವುದು ಕಡ್ಡಾಯ. ಆ ಮಾರ್ಗದರ್ಶಿ ಸೂತ್ರವನ್ನು ಅವರು ಪಾಲಿಸಲೇಬೇಕು. ಆ ಮಾರ್ಗದರ್ಶಿ ಸೂತ್ರವನ್ನು ಬಿಟ್ಟು ಮಾಡುವುದಕ್ಕಾಗುವುದಿಲ್ಲ. ಒಂದು ಗಮನದಲ್ಲಿಡಬೇಕು, CET ನಲ್ಲಿ Medical ಗೆ 33% ಇದೆ. ನಾವು 40% ಮಾಡಿದ್ದೇವೆ. CET ಗಿಂತ 7% ಕೋಟಾ ಜಾಸ್ತಿ ಮಾಡಿದ್ದೇವೆ. ಅದನ್ನು ರಾಜ್ಯ ಸರ್ಕಾರ ನಿಗದಿ ಮಾಡತಕ್ಕಂತಹ ಮೆರಿಟ್ ಮತ್ತು ರೋಸ್ಟರ್ ಮೇಲೆ ಕೊಡಬೇಕು ಎನ್ನತಕ್ಕಂಥದ್ದನ್ನು ಸೇರಿಸಿದ್ದೇವೆ. ಹಾಗಾಗಿ ಇದರಲ್ಲಿ ತರಾತುರಿ ಇಲ್ಲ. ಅವರು Higher Education Council ಗೆ ಅರ್ಜಿ ಸಲ್ಲಿಸಿದ ತಕ್ಷಣ retired vice chancellor ನೇತೃತ್ವದ ಸಮಿತಿ Local inspection Committee ಹೋಗಿ inspect ಮಾಡಿ ಆ ರಿಪೋರ್ಟ್ ಕೊಟ್ಟಿದ್ದನ್ನು ಪರಿಗಣಿಸಿ ಆ ಮೇಲೆ ಸಂಪುಟಕ್ಕೆ ತಂದು ಇಂದು ಸದನದಲ್ಲಿ ತಂದಿದ್ದೇವೆ. ಇದರಲ್ಲಿ ತರಾತುರಿ ಇಲ್ಲವೇ ಇಲ್ಲ. Filter ಮಾಡಿದ್ದೇವೆ. ದೂರದೃಷ್ಟಿ

ಇಟ್ಟುಕೊಂಡು ಮುಂದಿನ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಟ್ಟಿದ್ದೇವೆ. ಖಾಸಗಿ ಸಹಭಾಗಿತ್ವ ಬೇಕಾಗಿರುವುದು ಬರೀ ಅಪಾರ್ಟ್‌ಮೆಂಟ್ ಕಟ್ಟುವುದಕ್ಕಲ್ಲ. ಖಾಸಗಿ ಸಹಭಾಗಿತ್ವ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವುದಕ್ಕೂ ಬೇಕು. ಇವತ್ತು top 10 university ಗಳು ಇರತಕ್ಕಂಥದ್ದು ಸರ್ಕಾರಿ ಯೂನಿವರ್ಸಿಟಿ ಅಲ್ಲ. World top 10 University ಇರತಕ್ಕಂಥದ್ದು ಖಾಸಗಿ ವಿಶ್ವವದ್ಯಾಲಯಗಳು. ಅವು Harvard, Yale University, Stanford, Chicago, ಇವೆಲ್ಲವೂ ಕೂಡ ಖಾಸಗಿ ವಿಶ್ವವಿದ್ಯಾಲಯಗಳು. ನಮ್ಮ ದೇಶದಲ್ಲಿಯೇ ಪ್ರತಿ ವರ್ಷ ಐದರಿಂದ ಆರು ಲಕ್ಷ ಜನ ವ್ಯಾಸಾಂಗಕ್ಕಾಗಿ ವಿದೇಶಕ್ಕೆ ಹೋಗುತ್ತಾರೆ. ನಮ್ಮ ರಾಜ್ಯದವರು ಕನಿಷ್ಠ 15,000 ರಿಂದ 20,000 ಜನ ವಿದೇಶ ವ್ಯಾಸಾಂಗಕ್ಕಾಗಿ ಹೋಗುತ್ತಾರೆ. ಅದು ರಿವರ್ಸ್ ಟ್ರೆಂಡ್ ಪ್ರಾರಂಭವಾಗಬೇಕೆಂದು ನಮ್ಮ ಇಚ್ಛೆ ಇರುವುದು. ಒಂದು ಯೂನಿವರ್ಸಿಟಿ ಎಂದರೆ, ಅದು ಆರ್ಥಿಕವಾಗಿಯೂ ಸಶಕ್ತವಾಗಿರಬೇಕು, ಶೈಕ್ಷಣಿಕವಾಗಿಯೂ ಸಶಕ್ತವಾಗಿರಬೇಕು. ಖಾಸಗಿ ಸಹಭಾಗಿತ್ವ ಬೇಡ ಎನ್ನುವುದಾದರೆ ನಮ್ಮ ರಾಜ್ಯದಲ್ಲಿ ಒಟ್ಟು 195 ಇಂಜಿನಿಯರಿಂಗ್ ಕಾಲೇಜುಗಳಿವೆ. ಅದರಲ್ಲಿ 181 ಇಂಜಿನಿಯರಿಂಗ್ ಕಾಲೇಜುಗಳು ಪ್ರೈವೇಟ್ ಇಂಜಿನಿಯರಿಂಗ್ ಕಾಲೇಜುಗಳು. ನಾವು ಒಂದು ವೇಳೆ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ ಕೊಡದೇ ಹೋಗಿದ್ದರೆ ನಮ್ಮ ರಾಜ್ಯ IT capital ಎಂದು ಅನ್ನಿಸಿಕೊಳ್ಳುತ್ತಿರಲಿಲ್ಲ. ಅನಿವಾರ್ಯ, 2506 first grade collage ಗಳು ಇವೆ. ಅದರಲ್ಲಿ 360 ಮಾತ್ರ ಸರ್ಕಾರಿ ಕಾಲೇಜುಗಳು. ಇನ್ನು ಉಳಿದದ್ದೆಲ್ಲ ಪ್ರೈವೇಟ್ ಕಾಲೇಜುಗಳು. ಖಾಸಗಿ ಸಹಭಾಗಿತ್ವದ ಕಾರಣದಿಂದಲೇ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಆಗಿದೆ. ನಮ್ಮ ದೇಶದ ಪಾಲಿಸಿ ನೀವು universities ಬರಬಾರದು ಎಂದು ತಡೆಯುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಅದರಲ್ಲಿ ರಾಜ್ಯದ ಹಿತ ಕಾಪಾಡಿಕೊಳ್ಳಬೇಕು. ಎಲ್ಲಿಯೋ ಒಂದು shopping complex ನಲ್ಲಿ board ಹಾಕಬಾರದು. ಮಾನ್ಯ ನರೇಂದ್ರ ಬಾಬುರವರು ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಬೋರ್ಡ್ ಹಾಕಿರುವ ಬಗ್ಗೆ ಹೇಳಿದರು. ಅದಕ್ಕೇನೆ 25 ಎಕರೆ compact land ಎಂದು ಹೇಳಿದ್ದು. ಏಕೆ ಹೇಳಿದೆ ಎಂದರೆ, ಬೆಂಗಳೂರಿನಲ್ಲಿಯೇ ಎಲ್ಲಾ ಕಾಲೇಜುಗಳು ಬರಬಾರದು, ಹೊರಗಡೆ ಹೋಗಬೇಕು ಎನ್ನುವ ಕಾರಣಕ್ಕೋಸ್ಕರ. ಬೆಂಗಳೂರಿನಿಂದ ಆಚೆಗೆ ಹೋಗಬೇಕು ಎನ್ನುವ ಕಾರಣಕ್ಕೋಸ್ಕರ. ಸಾಮಾಜಿಕ ನ್ಯಾಯವನ್ನೂ ಕಾಪಾಡಿಕೊಂಡಿದ್ದೇವೆ, ರಾಜ್ಯದ ಮಕ್ಕಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟು–

ಕೊಂಡಿದ್ದೇವೆ, ಇದೆಲ್ಲಾ ಗಮನದಲ್ಲಿಟ್ಟುಕೊಂಡೇ ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಟ್ಟಿರತಕ್ಕಂಥದ್ದು. ನನ್ನ ಇಚ್ಛೆ real estate ದಂಧೆಯಲ್ಲಿ insvest ಮಾಡುವುದಕ್ಕಿಂತ universityಗಳಲ್ಲಿ insvest ಮಾಡಲಿ. Copetition ಪ್ರಾರಂಭವಾಗಲಿ. ಆ Copetition ಪ್ರಾರಂಭವಾದರೆ ನಮ್ಮ ಮಕ್ಕಳು educate ಆಗುತ್ತಾರೆ. ಕೌಶಲ್ಯ ಇರತಕ್ಕಂತಹ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಿದರೆ ಮುಂದಿನ ದಿನಗಳಲ್ಲಿ ನಮ್ಮ ಜನಸಂಖ್ಯೆಯೇ ನಮಗೆ ಆಸ್ತಿಯಾಗುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿಯಾದರೆ ಜನಸಂಖ್ಯೆಯೇ ನಮಗೆ ಒಂದು ಆಸ್ತಿಯಾಗುತ್ತದೆ. ಪ್ರೈವೇಟ್ ಯೂನಿವರ್ಸಿಟಿಗಳು ಈಸಿಯಾಗಿ ಸಿಲಬಸ್‌ಗಳಿಗೆ ಹೊಂದಿಕೆ ಮಾಡಿಕೊಳ್ಳಬಹುದು. ಒಂದು industry ಜೊತೆ tie up ಮಾಡಿಕೊಂಡು ಅದಕ್ಕೆ ಬೇಕಾದಂತಹ ಮಾನವ ಸಂಪನ್ಮೂಲವನ್ನು ತರಬೇತಿ ಕೊಟ್ಟು ಕಳುಹಿಸಬಹುದು. ಓದುತ್ತಿರುವಾಗಲೇ job gaurantee ಪಡೆದುಕೊಳ್ಳಬಹುದು. Campus selection ಮಾಡಿಕೊಳ್ಳಬಹುದು. Flexibility ಇರುತ್ತದೆ. ಇವಲ್ಲಾ Knowledge commission ಮಾಡಿರುವಂತಹ ಶಿಫಾರಸ್ಸುಗಳು. ಹಾಗಾಗಿ ಈ ಶಿಫಾರಸ್ಸುಗಳನ್ನು ಆಧರಿಸಿಯೇ ದೇಶದಲ್ಲಿರುವಂತಹ ಪಾಲಿಸಿಗನುಗುಣವಾಗಿ ಇದನ್ನು ಮಾಡಿದ್ದೇವೆ. ಇದರಲ್ಲಿ ರಾಜಸ್ಥಾನ ಅತಿ ಹೆಚ್ಚು ಇದೆ. ನಾನು 14 ರಾಜ್ಯಗಳನ್ನು ಸ್ಟಡಿ ಮಾಡಿ ಅದರಲ್ಲಿ ಇರುವಂತಹ ಉತ್ತಮ ಅಂಶಗಳನ್ನು ಪರಿಗಣಿಸಿ ಯಾವುದೇ ಒತ್ತಡಕ್ಕೆ ಒಳಗಾಗದೆ ಮಾಡದ್ದೇನೆ. ನೀವು ಇನ್ನೊಂದು ಕೇಳಿದಿರಿ, ಅಲೈಯನ್ಸ್ ಮತ್ತು ಅಜೀಂ ಪ್ರೇಂಜಿ ಯೂನಿವರ್ಸಿಟಿಗಳಿಗೆ ಏನು ಕೊಟ್ಟಿದ್ದೀರಿ, ಎಂದು ಕೇಳಿದಿರಿ, ಆ ವಿಶ್ವವಿದ್ಯಾಲಯಗಳೆಲ್ಲವೂ ಪ್ರತ್ಯೇಕವಾಗಿ ತರಬೇಕು, ಆ ಎರಡೂ ಯೂನಿವರ್ಸಿಟಿಗಳಿಗೆ reservation ಇಲ್ಲ. ರಾಜ್ಯದ ಕೋಟಾ ಎಷ್ಟು ಎಂದು ಇಲ್ಲ. ಆದರೆ ಆ ಮೇಲೆ ಅವರು 25% consent ಗೆ letter ಕೊಟ್ಟಿದ್ದಾರೆ. ಆದರೆ ಅದು Act ನಲ್ಲಿ ಇಲ್ಲ. ಆದರೆ ಈಗ ಅದನ್ನು ತರುವುದಕ್ಕಾಗುವುದಿಲ್ಲ. ಪ್ರತ್ಯೇಕವಾಗಿ ಅದನ್ನು ಅಮೆಂಡ್ ಮಾಡಬೇಕಾಗುತ್ತದೆ. ಪ್ರತ್ಯೇಕವಾಗಿ ಆ Act ಗೆ ತಿದ್ದುಪಡಿ ತರಬೇಕಾಗುತ್ತದೆ.

ಶ್ರೀ ನೆ.ಲ.ನರೇಂದ್ರ ಬಾಬು : ಹಾಗಾದರೆ, ಅದಕ್ಕೂ ಅನ್ವಯವಾಗುವ ಹಾಗೆ ನೀವು ನಮಗೊಂದು ಭರವಸೆ ಕೊಡಿ.

ಶ್ರೀ ಸಿ.ಟಿ.ರವಿ : ಇದನ್ನೆಲ್ಲಾ ಪರಿಗಣಿಸಿ 'ನಾವು ಮಾಡಿರತಕ್ಕಂಥದ್ದು. ನೀವು appreciata ಮಾಡಬೇಕು. 40% ರಾಜ್ಯದ ಹಿತ ಕಾಪಾಡಿದ್ದೇವೆ. CET

ಯಲ್ಲಿಯೂ 40% ಇಲ್ಲ. ನಿಮಗೆ fees fixation ಗೆ ಮಾಡಿದ್ದೇವೆ. ಎಷ್ಟು ಸಾಧ್ಯವಾಗುತ್ತದೆ ಅಷ್ಟು ಉತ್ತಮವಾದ ಸಂಸ್ಥೆಗಳು ಬರಬೇಕೆಂದು ಯೋಚನೆ ಮಾಡಿದ್ದೇವೆ. ಅಂಗಡಿ ಬಾಗಿಲು ತೆಗೆಯುವವರೆಲ್ಲರಿಗೂ ಯೂನಿವರ್ಸಿಟಿ ಬೋರ್ಡ್ ಕೊಟ್ಟಿಲ್ಲ. ಐದು ವರ್ಷ ಅವರಿಗೆ Constituent collegeಗಳನ್ನು ಹೊಂದುವುದಕ್ಕೆ ಅವಕಾಶ ಕೊಟ್ಟಿಲ್ಲ. ಐದು ವರ್ಷ ಸ್ಟಡಿ ಮಾಡಿದ ನಂತರ ಆ ಮೇಲೆ ಅವರು ಸರ್ಕಾರದ ಅನುಮತಿ ಪಡೆದು Constituent collegeಗಳನ್ನು ರಾಜ್ಯದಲ್ಲಿ ಹೊಂದಬಹುದು. affiliationಗೆ ಕೊಟ್ಟಿಲ್ಲ. Distance educationಗೆ ಕೊಟ್ಟಿಲ್ಲ. ಅವರು ಮೂರು ತಿಂಗಳು ಕೋರ್ಸ್ ಮಾಡಿ ವ್ಯಾಪಾರ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಕೊಟ್ಟಿಲ್ಲ. ಇವೆಲ್ಲವನ್ನೂ ಇದರ ಒಳಗಡೆ ತಿದ್ದುಪಡಿಯಲ್ಲಿ ತಂದಿದ್ದೇವೆ. ಹಾಗಾಗಿ ಇದನ್ನು ಅಂಗೀಕರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ. ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ವಿವರಣೆಯನ್ನು ಕೊಡಬೇಕಾದಾಗ ರಿಯಲ್ ಎಸ್ಟೇಟ್‌ಗೂ ಹೋಲಿಸಿದರು, ಆಮೇಲೆ ಮಾನವ ಸಂಪನ್ಮೂಲ ಬರಬೇಕು ಎಂದು ಅದೆಲ್ಲವನ್ನೂ ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಏಕಾಏಕಿ ಬಿಲ್‌ಗಳು ಬರುತ್ತಿರುವುದನ್ನು ನೋಡಿದಾಗ ಇದು ಸ್ವಲ್ಪ ರಿಯಲ್ ಎಸ್ಟೇಟ್‌ಗೆ ಹತ್ತಿರವಿದ್ದಂತೆ ಕಾಣುತ್ತಿದೆ. ನಾನು ಒಂದು ಮಾತನ್ನು ಕೇಳುತ್ತೇನೆ.

ಶ್ರೀ. ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ರಿಯಲ್ ಎಸ್ಟೇಟ್ ಅಲ್ಲ. ರಿಯಲ್ ಇಂಟರೆಸ್ಟ್.

ಶ್ರೀ. ಟಿ.ಬಿ. ಜಯಚಂದ್ರ :– ಆ ರೀತಿ ಮಾನ್ಯ ಸಚಿವರು ರಿಯಲ್ ಇಂಟರೆಸ್ಟ್ ಎಂದು ಹೇಳಲಿ. ಈಗ ಒಂದೇನಾಗಿದೆಯೆಂದರೆ, ಈಗ ನಮ್ಮಲ್ಲಿ ಪ್ರತಿಷ್ಠಿತ ಸಂಸ್ಥೆಗಳಿವೆ, ವಿಪ್ರೋದವರು ಒಂದು ಯೂನಿವರ್ಸಿಟಿಯನ್ನು ಮಾಡಬೇಕೆಂದು ಹೊರಟಾಗ, ಎಂ.ಎಸ್.ಆರ್. ರವರು ಯೂನಿವರ್ಸಿಟಿಯನ್ನು ಮಾಡಬೇಕೆಂದು ಹೊರಟಂಥ ಸಂದರ್ಭದಲ್ಲಿ ನಮಗೆಲ್ಲರಿಗೂ ಗೊತ್ತಿರತಕ್ಕಂಥದ್ದು, ಅವರ ಮೂಲ ಇವತ್ತು ಕರ್ನಾಟಕ, ಬೆಂಗಳೂರು ನೆಲದಲ್ಲಿಯೇ ಹುಟ್ಟಿ, ಬೆಳೆದು ಸಾಕಷ್ಟು ಸಂಸ್ಥೆಗಳನ್ನು ಮಾಡಿ ವಿದ್ಯಾ ಕ್ಷೇತ್ರದಲ್ಲಿ ಸೇವೆಯನ್ನು ಮಾಡಿರತಕ್ಕಂಥವರು ಯೂನಿವರ್ಸಿಟಿಯನ್ನು ಮಾಡತಕ್ಕಂಥದ್ದು ಸ್ವಾಭಾವಿಕ. ಆದರೆ ಇಲ್ಲಿ ಸಿ.ಎಂ.ಆರ್. ಎಂದರೆ ಏನು ಎಂದು ನನಗರ್ಥವಾಗಲಿಲ್ಲ. ಸಿ. ಎಂದರೆ ಏನು, ಎಂ. ಎಂದರೆ ಏನು ಮತ್ತು ಆರ್ ಎಂದರೆ ಏನು ಎಂದು ನನಗರ್ಥವಾಗಲಿಲ್ಲ.

ಶ್ರೀ ಸಿ.ಟಿ.ರವಿ : ಐ.ಪಿ.ಎಸ್. ಆಫೀಸರ್ ರಾಮಮೂರ್ತಿಯವರಿದ್ದರಲ್ಲ, ಅವರ ಸಂಸ್ಥೆ ಅದು. ಅವರು Managing Director ಆಗಿರತಕ್ಕಂಥ ಸಂಸ್ಥೆ. 22 ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಅದು ಯಾವುದು ಎಂದು ಕೇಳಿದರೆ ಬೇಕಾದರೆ ಆ ಸಂಸ್ಥೆಗಳ ಹೆಸರುಗಳನ್ನೆಲ್ಲಾ ನಾನು ಓದಿ ಬಿಡುತ್ತೇನೆ.

ಶ್ರೀ. ಟಿ.ಬಿ. ಜಯಚಂದ್ರ :- ನೀವು ಅವರ ಇತಿಹಾಸಗಳನ್ನು, ಅವರು ಏನಾಗಿದ್ದಾರೆ, ಏನು ಕಥೆ ಅವರ background ಏನು ಎನ್ನತಕ್ಕಂಥದ್ದರ ಬಗ್ಗೆ ಸ್ವಲ್ಪ ಹೇಳಿದರೆ, ಅವರು ರಿಯಲ್ ಎಸ್ಟೇಟ್ ಮಾಡುತ್ತಾರೋ, ಅಥವಾ ನಿಜವಾಗಿಯೂ ಶಿಕ್ಷಣದಲ್ಲಿ ಬೇರೆ ತರಹದಲ್ಲಿ ವ್ಯಾಪಾರ ಮಾಡುತ್ತಾರೋ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ಆದರೆ ಎಲ್ಲೋ ಒಂದು ಕಡೆಗೆ ಹೇಳುವುದಾದರೆ, ಬೆಳಗಾಂ ಅಧಿವೇಶನದಲ್ಲಿಯೂ ಕೂಡ ಹತ್ತೋ, ಹದಿನೈದೋ ಬಿಲ್‌ಗಳನ್ನು ಪಾಸ್ ಮಾಡಲಾಗಿದೆ. ದಯಮಾಡಿ ಯಾವ ಸಂಸ್ಥೆಗೆ ಇಲ್ಲಿ ಲೋಕಲ್‌ನಲ್ಲಿ existence ಇದೆ, ಅವರಿಗೆ Commitment ಇದೆ, ಈಗಾಗಲೇ institutionಗಳಿವೆಯೋ ಅಂಥವರಿಗೆ ಅವಕಾಶ ಕೊಡಿ. ಆದರೆ ಯಾರೋ ಎಲ್ಲಿಂದಲೋ ಬಂದವರಿಗೆ, ಯಾವ institution ಇಲ್ಲದೇ ಇದ್ದರೂ ಕೂಡ 25 ಎಕರೆ ಜಮೀನು ಕೊಡುತ್ತಾರೆ, 50 ಲಕ್ಷ ರೂ.ಗಳ ಹಣವನ್ನು ಇಡುತ್ತಾರೆ ಎನ್ನುವ ಒಂದೇ ಕಾರಣಕ್ಕೋಸ್ಕರ ಯೂನಿವರ್ಸಿಟಿಗಳನ್ನು ಕೊಡತಕ್ಕಂಥದ್ದು ಸಾಧುವೆ ಎನ್ನತಕ್ಕಂಥದ್ದು ನನ್ನ ಪ್ರಶ್ನೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಹಳಷ್ಟು ಕಾಲೇಜ್‌ಗಳ ಪರವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ವಾಸ್ತವಿಕವಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಈಗ ಪ್ರೈವೇಟ್ ಸ್ಕೂಲ್‌ಗಳನ್ನೇ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಆ ಖಾಸಗಿ ಶಾಲೆಗಳು ತೆಗೆದುಕೊಳ್ಳುವ ಡೊನೇಷನ್‌ಗಳನ್ನು ನಿಯಂತ್ರಣ ಮಾಡುವುದಕ್ಕೆ ಇವತ್ತಿನವರೆಗೆ ಆಗಿದೆಯೇ? ಅವರೆಲ್ಲರೂ ಇದನ್ನು ಬಿಸಿನೆಸ್ ಎಂದು ಪರಿಗಣಿಸಿದ್ದಾರೆ. ಅವರು Social work ಮಾಡಲಿ, we welcome. ಆದರೆ ಇವತ್ತು ನಮ್ಮ ಜಿಲ್ಲಾ ಸ್ಥಳಗಳಲ್ಲಿ ಆ ಶಾಲೆಗಳವರು ಫೀಸ್ ನಿಗದಿ ಮಾಡಿರುವುದನ್ನು ನೋಡಿದರೆ ಗಾಬರಿಯಾಗುತ್ತದೆ. ಮೊನ್ನೆ ಕೇಂದ್ರ ಸರ್ಕಾರದವರು ಖಾಸಗಿ ಶಾಲೆಗಳಲ್ಲಿ ಬಡ ಮಕ್ಕಳಿಗೆ ಶೇಕಡ 25 ರಷ್ಟು ಸೀಟ್‌ಗಳನ್ನು ಮೀಸಲಿಡಬೇಕೆಂದು Right to Education ಎಂದು ಕಾನೂನು ಮಾಡಿದೆ. ಕಳೆದ ವರ್ಷ ಈ ವಿಚಾರದಲ್ಲಿ ಏನಾಗಿದೆ ಎಂದು ಈ ಬಗ್ಗೆ evaluation ಮಾಡಿದ್ದೀರಾ? ಅಲ್ಲೇ ಇವತ್ತು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಇಡೀ ರಾಜ್ಯದಲ್ಲಿ ಅಷ್ಟೊಂದು ಲೂಟಿ

ನಡೆಯುತ್ತಿದೆ. ಬಡವರ ಮಕ್ಕಳಿಗೆ ಶ್ರೀಮಂತರ ಮಕ್ಕಳ ಜೊತೆಯಲ್ಲಿ ಡ್ರೆಸ್ ಹಾಕಿಕೊಳ್ಳುವುದಕ್ಕೆ ಆಗುತ್ತಿಲ್ಲ, ಹಾಸ್ಟೆಲ್‌ಗಳಲ್ಲಿ ಅವರ ಜೊತೆ ಇರುವುದಕ್ಕೆ ಆಗುತ್ತಿಲ್ಲ. ಇನ್ನು ಕಾಲೇಜ್‌ಗಳ ವಿಚಾರಕ್ಕೆ ಬಂದರೆ, ಈಗ ಮಾನ್ಯ ಸಚಿವರು ಹೇಳಿದರು, ನಮ್ಮಲ್ಲಿ ಎಷ್ಟು ಖಾಸಗಿ ಇಂಜನಿಯರಿಂಗ್ ಕಾಲೇಜ್‌ಗಳಿವೆ ಮತ್ತು ಸರ್ಕಾರಿ ಕಾಲೇಜ್‌ಗಳು ಎಷ್ಟಿವೆ ಎಂಬುದನ್ನು ಹೇಳಿದರು. ಇವತ್ತು ಬೆಂಗಳೂರಿನಲ್ಲಿರುವ ಖಾಸಗಿ ಕಾಲೇಜುಗಳಿಗೆ ನಮ್ಮ ಕಡೆಯವರು ಸರ್ಕಾರಿ ಕೋಟಾದಲ್ಲಿ ಬಂದಾಗ, ಅವರುಗಳು ಹಾಸ್ಟೆಲ್‌ಗೆ ಹೋದಾಗ ಅವರಿಗೆ ಹಾಸ್ಟೇಲ್ ಸೌಕರ್ಯಕ್ಕಾಗಿ ಖಾಸಗಿ ಕಾಲೇಜ್‌ನವರು ನಿಗದಿ ಮಾಡಿರುವ ಫೀಸ್‌ನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಅಂದರೆ ಅಷ್ಟು ಹೆಚ್ಚು ಶುಲ್ಕವನ್ನು ಹಾಸ್ಟೆಲ್ ಸೌಕರ್ಯ ಪಡೆಯಲು ನಿಗದಿ ಮಾಡಿದ್ದಾರೆ. Government reservation ಎಂದು ನೀವು ಹೇಳುತ್ತೀರಿ. ಎಲ್ಲಿ reservation? Only fees, ಅದೇನು ಹದಿಮೂರೋ, ಹದಿನಾಲ್ಕೋ ಅಥವಾ ಹೆಚ್ಚೆಂದರೆ ಇಪ್ಪತ್ತು ಸಾವಿರ ರೂ.ಗಳ ಫೀಸ್ ಇರುತ್ತದೆ, ಅಷ್ಟಕ್ಕೆ ಮಾತ್ರ ಸೀಮಿತ. ಆದರೆ ಖಾಸಗಿ ಕಾಲೇಜ್‌ನವರು ಇದಲ್ಲದೇ Building Fund ಎಂದು collect ಮಾಡುತ್ತಿದ್ದಾರೆ. ಆಮೇಲೆ Hostel Fees collect ಮಾಡುತ್ತಿದ್ದಾರೆ. ಶ್ರೀಮಂತರ ಮಕ್ಕಳು ಎಷ್ಟು ಫೀಸ್‌ನ್ನು ಹಾಸ್ಟೆಲ್‌ಗೆ ಕಟ್ಟುತ್ತಾರೋ ಅಷ್ಟೇ ಫೀಸ್‌ನ್ನು ಬಡವರ ಮಕ್ಕಳು ಕಟ್ಟಬೇಕು. ಈ ಹಾಸ್ಟೆಲ್ ಫೀಸ್ ವಿಚಾರದಲ್ಲಿ ಏನು deduction ಬಡವರ ಮಕ್ಕಳಿಗೆ ಇದೆ ಹೇಳಿ? ಇನ್ನು ಇವರು ರಿಸರ್ವೇಷನ್ ಬಗ್ಗೆ ಹೇಳಿದರು, Reservation mandatory ಆಗಬೇಕು, ಆಮೇಲೆ ಯಾವ ರೀತಿ ಎಲ್ಲಾ ಕಡೆಯಲ್ಲಿ ರಿಸರ್ವೇಷನ್ OBC, SC/ST, Minorities ಗೆ ರೋಸ್ಟರ್ ಪ್ರಕಾರ ಇರಬೇಕು. ಆಮೇಲೆ ಈ private university ಯವರು ಏನು ಮಾಡುತ್ತಾರೆಂದರೆ, ಇವತ್ತು private Engineering collect, Medical college ಗಳಲ್ಲಿ ಏನಾಗುತ್ತಿದೆಯೆಂದರೆ ಇವತ್ತು ಸರ್ಕಾರಿ ಸೀಟ್‌ಗಳನ್ನು ಉಳಿಸಿಕೊಳ್ಳುವುದು, ಕಡೆಯಲ್ಲಿ ಅದನ್ನು ಜನರಲ್ ಸೀಟ್ ಎಂದು ಹೇಳಿ ಕನ್‌ವರ್ಟ್ ಮಾಡಿಕೊಳ್ಳುವುದು ನಡೆಯುತ್ತಿದೆ. ನೀವು private partnership ಬರಬೇಕೆಂದು ಹೇಳುತ್ತಿದ್ದೀರಿ. ಆದರೆ interms of social work ಬಂದಿದ್ದರೆ ಸರಿ. ಅದಕ್ಕಾಗಿ in the interest of the backward class and reservation people ನಾನು ಒಂದು ಸಲಹೆ ಕೊಡುವುದೇನೆಂದರೆ, ಈ Hostel Fees and Admission Fees, both should be exempted

ಎಂದು ಮಾಡಬೇಕು. ಇವೆರಡೂ free ಇರಬೇಕು ಎಂದು ಮಾಡಿ. ಖಾಸಗಿ ಕಾಲೇಜ್‌ಗಳವರು ಬಿಸಿನೆಸ್ ಮಾಡುತ್ತಿದ್ದಾರೆ. ಅವರೇನು ಕಾಲೇಜುಗಳನ್ನು ಪುಕ್ಕಟೆಯಾಗಿ ನಡೆಸುತ್ತಿಲ್ಲ. ನಮ್ಮ ಕಡೆಯಿಂದ ಎಷ್ಟೋ ಮಕ್ಕಳು ಬೆಂಗಳೂರಿನಲ್ಲಿರುವ ಖಾಸಗಿ ಕಾಲೇಜ್‌ಗಳಿಗೆ ಓದುವುದಕ್ಕೆ ಬರುತ್ತಾರೆ. ಖಾಸಗಿ ಕಾಲೇಜ್‌ಗಳು ಹಾಸ್ಟೆಲ್, ಫೀಸ್ ನಿಗದಿ ಮಾಡಿರುವುದು ಜಾಸ್ತಿಯಿದ್ದಾಗ ಆ ಮಕ್ಕಳು ನನ್ನ ಕಡೆಗೆ ಬಂದಾಗ ನಾನೇ ಕಾಲೇಜ್‌ನ ಛೇರ್ಮನ್‌ರವರಿಗೆ ಫೋನ್ ಮಾಡಿ ಇಷ್ಟೊಂದು ಹೆಚ್ಚು ಹಾಸ್ಟೆಲ್ ಶುಲ್ಕವನ್ನು ಕಟ್ಟುವುದಕ್ಕೆ ಮಕ್ಕಳಿಗೆ ಆಗುವುದಿಲ್ಲ ದಯವಿಟ್ಟು ಸ್ವಲ್ಪ ಕಡಿಮೆ ಮಾಡಿ ಎಂದು ಹೇಳಿದ್ದೇನೆ. ಇದಲ್ಲದೇ ನಾನೇ ನನ್ನ ಕೈಯಿಂದ ಕೆಲವರಿಗೆ ಫೀಸ್ ಕಟ್ಟಲು ಹಣವನ್ನು ಕೊಟ್ಟು ಕಳುಹಿಸಿದ್ದೇನೆ. ಹೀಗಾಗಿ ಮಾನ್ಯ ಅಧ್ಯಕ್ಷರೆ, ಇವರು 40 ಪರ್ಸೆಂಟ್ ಎಂದು ಹೇಳಿ ಹೋಗಿದ್ದಾರೆ, ಅದು ಅಮ್ಮಮ್ಮ ಎಂದರೆ ಫೀಸ್ ಎಷ್ಟಿರುತ್ತದೆ? ಅದು ಸ್ವಲ್ಪ ಇರುತ್ತದಷ್ಟೆ. ಆದರೆ Hostel Fees ಬಹಳಷ್ಟು ಹೆಚ್ಚಿದೆ. ಆದುದರಿಂದ ಯಾವುದೇ ಕಾರಣಕ್ಕೂ Building Fund ಕೊಡುವಂತಿಲ್ಲ, Fees ಕೊಡುವಂತಿಲ್ಲ, ಎಂದು ಹೇಳಬೇಕು. ಒಂದು ವೇಳೆ ಈ ಶುಲ್ಕಗಳನ್ನು ಕಟ್ಟಬೇಕೆಂದು ಹೇಳಿದರೆ ಆ ಶುಲ್ಕಗಳನ್ನು ಸರ್ಕಾರವೇ ಭರಿಸಲಿ. ಆದರೆ ಆ ವಿದ್ಯಾರ್ಥಿಗಳು ಕೊಡುವಂತಿಲ್ಲ. ಏಕೆಂದರೆ ರಿಸರ್ವೇಷನ್‌ನಲ್ಲಿ ಸೀಟ್ ಪಡೆದ ಮಕ್ಕಳು ಬಹಳ ನೋವನ್ನು ಅನುಭವಿಸುತ್ತಿದ್ದಾರೆ. ಬೀದರ್, ಗುಲ್ಬರ್ಗಾ ಮತ್ತು ಈ ಬೆಂಗಳೂರಿನಲ್ಲಿರುವಂಥ ವಿದ್ಯಾರ್ಥಿಗಳು ಪಡುತ್ತಿರುವ ಕಷ್ಟವನ್ನು ನಾವು ನೋಡುತ್ತಿದ್ದೇವೆ. ಮಾಡಿದರೆ ಈ ರೀತಿ ಮಾಡಿ, ಇಲ್ಲದಿದ್ದರೆ ಈ ಬಿಲ್‌ನ್ನು ವಾಪಸ್ ತೆಗೆದುಕೊಳ್ಳಿ. ನಾವು ಇದಕ್ಕೆ ವಿರೋಧ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಂದ ಮೇಲೆ ಅನೇಕ ವಿಶ್ವವಿದ್ಯಾಲಯಗಳನ್ನು ಖಾಸಗಿಯವರು ಸ್ಥಾಪನೆ ಮಾಡುವುದಕ್ಕೆ ತುಂಬಾ ಉತ್ಸುಕತೆಯಿಂದ ಬಿಲ್‌ಗಳನ್ನು ತಂದು ತರಾತುರಿಯಲ್ಲಿ ಮಂಡನೆ ಮಾಡುತ್ತಾ ಬಂದಿದ್ದಾರೆ. ಇದರ ಉದ್ದೇಶ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು, ಇವತ್ತು ನಮ್ಮ ರಾಜ್ಯದ ಯುವ ಜನರು ಒಂದು ನೈತಿಕತೆಯನ್ನು ಬೆಳೆಸಿಕೊಳ್ಳುತ್ತಾ, ಶಿಕ್ಷಣ ಕ್ಷೇತ್ರ ಹಣ ಇರುವವರ ಕೈಯಲ್ಲಿ ಸಿಕ್ಕಿ ಅಥವಾ ಬಂಡವಾಳಶಾಹಿಗಳ ಕೈಯಲ್ಲಿ ಸಿಕ್ಕಿ ಒಂದು ಹಣ ಮಾಡತಕ್ಕಂಥ ದಂಧೆಯಾಗಿ ಪರಿವರ್ತನೆಯಾಗದೆ ಶಿಕ್ಷಣದ ಮೂಲ, ಮೌಲ್ಯಗಳನ್ನು ಮತ್ತು ಅದರ ಚಾರಿತ್ರಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇಂಥ ಕಾಯಿದೆಗಳನ್ನು ತರುವಾಗ ಆ ಬಗ್ಗೆ ಹೆಚ್ಚು ಆಳವಾದ ಅಧ್ಯಯನವನ್ನು ಮಾಡಿ

ಇದಕ್ಕೆ ಒಂದು ಪರಿಪಕ್ವವಾದಂಥ ಕಾಯಿದೆಯನ್ನು ತರತಕ್ಕಂಥದ್ದು ಸೂಕ್ತ. ಮಾನ್ಯ ಶಿಕ್ಷಣ ಸಚಿವರಾದಂಥ ರವಿಯವರು ತುಂಬಾ ಉತ್ಸುಕರಾಗಿ ಕೆಲಸವನ್ನು ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದರೂ, ನಾವು ಕಳೆದ ಅಧಿವೇಶನದ ಸಂದರ್ಭದಲ್ಲಿ ನೋಡಿದೆವು, ಇಲ್ಲಿಯೂ ನೋಡಿದೆವು, ಮತ್ತೆ ನಮ್ಮ ಅರವಿಂದ ಲಿಂಬಾವಳಿಯವರು ಹಿಂದೆ ಉನ್ನತ ಶಿಕ್ಷಣ ಇಲಾಖೆ ಸಚಿವರಾಗಿದ್ದರು, ನಾಯಿಕೊಡೆಗಳಂತೆ ವಿಶ್ವವಿದ್ಯಾಲಯಗಳನ್ನು ಖಾಸಗಿಯವರಿಗೆ ಮಂಜೂರು ಮಾಡುತ್ತಾ ಈ ಸಂಸ್ಥೆ ಇರತಕ್ಕಂಥದ್ದೇ, ಈ ಒಂದು ವಿಧಾನಸಭೆ ಸದಸ್ಯರಾಗಿ ಇರತಕ್ಕಂಥದ್ದೇ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ನಾವು ಆಯ್ಕೆಯಾಗಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಕಾಣುತ್ತಿದೆ. ಜಗತೀಕರಣ, ಉದಾರೀಕರಣ, ಖಾಸಗೀಕರಣವಾದ ಮೇಲೆ ನಮ್ಮ ಸಂವಿಧಾನದ ಆಶಯವಾದಂಥ ಸಾಮಾಜಿಕ ನ್ಯಾಯ ಮತ್ತು ಸಮಾನತೆ ದುರ್ಬಲಗೊಳ್ಳುತ್ತಾ ಬರುತ್ತಿದೆ. ಅಮೆರಿಕದ ಸಂವಿಧಾನಕ್ಕೆ 350 ವರ್ಷಗಳ ಇತಿಹಾಸವಿದೆ. ಅಲ್ಲಿ ಮೀಸಲಾತಿಯನ್ನು ಅಲ್ಲಿಯ ಸಂವಿಧಾನದಲ್ಲಿ ಅಳವಡಿಸಿಲ್ಲ. ಆದರೆ affirmative action ಮುಖಾಂತರ ಸುಮಾರು 100 A+ company ಗಳಲ್ಲಿ ಮೀಸಲಾತಿ ಲಭ್ಯವಿಲ್ಲದಿದ್ದರೂ ಕೂಡ African, American black people, ಇವರೆಲ್ಲರೂ ಕೂಡ ಅಲ್ಲಿ C.E.O. ಗಳಾಗಿ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮಲ್ಲಿ ಮೀಸಲಾತಿ ಇದ್ದರೂ ಕೂಡ ನಿರಾಕರಣೆ ಮಾಡತಕ್ಕಂಥ ಧೋರಣೆ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಆದಮೇಲೆ ಇಲ್ಲಿ ದುರ್ಬಲ ವರ್ಗದ ಸಮುದಾಯಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಉನ್ನತ ಶಿಕ್ಷಣವನ್ನು ಪಡೆಯುವುದಕ್ಕೆ ಆಗದೆ ಸರ್ಕಾರದ ಮಟ್ಟದಲ್ಲಿ ಎಷ್ಟು ಆಗುತ್ತದೋ ಅಷ್ಟು, ಇಡೀ ಶಿಕ್ಷಣವನ್ನು ಖಾಸಗಿಯವರು ಇಲ್ಲದೇ ಹೋಗಿದ್ದರೆ ಯಾರಿಗೂ ಶಿಕ್ಷಣವೇ ಸಿಗುತ್ತಿರಲಿಲ್ಲ ಎನ್ನತಕ್ಕಂಥ ಮಾತನ್ನು ನಮ್ಮ ರಾಜ್ಯದ ಉನ್ನತ ಶಿಕ್ಷಣ ಸಚಿವರು ಹೇಳಿದ ಮೇಲೆ, the role and responsibility of the Government is totally irresponsible. ಅವರು ಇಲ್ಲದೇ ಹೋಗಿದ್ದರೆ ನಾವು ಶಿಕ್ಷಣವನ್ನೇ ಪಡೆಯುತ್ತಿರಲಿಲ್ಲವೇನೋ ಎನ್ನುವಂತಹ ಧೋರಣೆಯೇ ಅತ್ಯಂತ ಬೇಜವಾಬ್ದಾರಿಯಾದಂತಹ ಧೋರಣೆ. ಹಿಂದೆ C.E.T. ಇತ್ತು. ಕಲ್ಲು ಹೊಡೆಯುವವರು, ರಿಕ್ಷಾ ತುಳಿಯುವವರು, ಕಳೆ ಕೀಳುವವರ ಎಲ್ಲಾ ಮಕ್ಕಳು ಉನ್ನತ ಶಿಕ್ಷಣದಲ್ಲಿ ಸ್ಥಾನ ಪಡೆಯುತ್ತಿದ್ದರು. ಅದನ್ನು ನಾವು ಸರಿಯಾಗಿ ನಿರ್ವಹಣೆ ಮಾಡುವುದಕ್ಕಾಗದೇ ಇವತ್ತು ಖಾಸಗಿಯವರ ಕೈಯಲ್ಲಿ C.E.T.

ಮತ್ತೆ ಸಿಕ್ಕಿಹಾಕಿಕೊಂಡಿದೆ. ಯಾರ್ಯಾರಿಗೆ ಹಣ ಇದೆ, ಯಾರ್ಯಾರು ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾರೆ, ಅವರ ಕೈಗೆ ನೀವು ಶಿಕ್ಷಣ ಸಂಸ್ಥೆಗಳನ್ನು, ವಿಶ್ವವಿದ್ಯಾಲಯಗಳನ್ನು ಕೊಟ್ಟುಬಿಟ್ಟರೆ, ಅಲ್ಲಿ ಯಾರು ಪ್ರೊಫೆಸರ್ ಇರುತ್ತಾರೋ ಏನೋ? ತಮಗೆ ಗೊತ್ತಿರಬೇಕು, ಮದ್ರಾಸ್ IIT, IMA ಅಂತಹ ಸಂಸ್ಥೆಗಳಲ್ಲಿ 447 ಜನ ಪ್ರೊಫೆಸರ್‌ಗಳಲ್ಲಿ ಒಬ್ಬರು ಅಥವಾ ಇಬ್ಬರು Scheduled Casteನವರು ಬಿಟ್ಟರೆ, there is no backward class, there is no minority, there are no ST Professors. ಮತ್ತೆ ಮೇಲೆ ಯಾವ ರೀತಿ ಬರಬೇಕು? ಯಾವ ರೀತಿ ಸಮಾನತೆ ಕೊಡುತ್ತೀರಿ? ನಾವು higher education ಪಡೆಯದಿದ್ದರೆ ಅಧಿಕಾರ ನಿರ್ಣಯದ ಸ್ಥಳಗಳಿಗೆ ಬರುವುದು ಹೇಗೆ? ಈ ರೀತಿ ಅನೇಕ ಮಹತ್ತರವಾದ ವಿಷಯಗಳಿರುವುದರಿಂದ ಮಾನ್ಯ ಶಿಕ್ಷಣ ಸಚಿವರು ಇವೆಲ್ಲವನ್ನೂ ಕೂಲಂಕಷವಾಗಿ ಪರಮಾರ್ಶಿಸಬೇಕು. ನೀವು ವಿಶ್ವವಿದ್ಯಾಲಯ-ಗಳನ್ನು ಕೊಡುವಾಗ ನಮ್ಮ ರಾಜ್ಯದ ನೆಲ, ವಿದ್ಯುಚ್ಛಕ್ತಿ, ನೀರು ಮತ್ತು ಇತರೆ ಸವಲತ್ತುಗಳನ್ನು ಪಡೆದುಕೊಳ್ಳುತ್ತಾರೆ. ಅವರು ಅದನ್ನು ಪಡೆಯುವಾಗ ರಾಜ್ಯಾಂಗಕ್ಕೆ ಬದ್ಧವಾಗಿರಬೇಕಾಗುತ್ತದೆ. ರಾಜ್ಯಾಂಗದ ಆಶಯಕ್ಕೆ ಅನುಗುಣವಾಗಿ ನಡೆಯಬೇಕಾಗುತ್ತದೆ. ಆ ರೀತಿ ನಡೆದುಕೊಳ್ಳಬೇಕೆಂದು ನಿರ್ದೇಶನ ಕೊಡತಕ್ಕಂಥದ್ದು, ಆ ರೀತಿ ಹಿಡಿತ ಇಟ್ಟುಕೊಳ್ಳತಕ್ಕಂಥದ್ದು ಸರ್ಕಾರದ ಹೊಣೆ ಮತ್ತು ಜವಾಬ್ದಾರಿ. ಅದನ್ನು ಮಾಡದೇ ನಮಗೆ ಯಾರ್ಯಾರು ಆಪ್ತರಿದ್ದಾರೆ, ಯಾರ್ಯಾರು ಕೇಳುತ್ತಿದ್ದಾರೆ, ಯಾರಿಗೆ ಕೊಡಬಹುದು ಎಂದು ಸುಮ್ಮನೆ ತರಾತುರಿಯಲ್ಲಿ ಕೊಟ್ಟುಬಿಡುವುದು. ಸರ್ಕಾರ ಎಂದರೆ Government is a continuous process. ನೀವು ಅಲ್ಲಿರಬಹುದು, ನಾವು ಇಲ್ಲಿರಬಹುದು, ನಾವು ಆ ಕಡೆ ಹೋಗಬಹುದು, ನೀವು ಈ ಕಡೆ ಬರಬಹುದು. ನಾವು ನಿರ್ಣಯಗಳನ್ನು ಮಾಡುವಾಗ, ಕಾಯಿದೆಗಳನ್ನು ಮಾಡುವಾಗ ಜವಾಬ್ದಾರಿಯಿಂದ ಎಲ್ಲಾ ಜನರ ಹಿತವನ್ನು ಕಾಪಾಡುವುದರ ಜೊತೆಗೆ ರಾಜ್ಯಾಂಗದ ಮೂಲ ಉದ್ದೇಶಕ್ಕೆ ಧಕ್ಕೆ ಬರದ ರೀತಿಯಲ್ಲಿ ತೀರ್ಮಾನಗಳು ಆಗಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತು ಖಾಸಗಿ ವಿಶ್ವವಿದ್ಯಾಲಯಗಳನ್ನು ತೆರೆಯುವುದಕ್ಕೆ ಶರವೇಗದಲ್ಲಿ ಓಡುತ್ತಿರುವಂತಹ ಸರ್ಕಾರ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ನ್ಯಾಯವನ್ನು ಅದರಲ್ಲಿ ಅಳವಡಿಸಿಕೊಳ್ಳಬೇಕು. ಅದಕ್ಕೆ ಮಾನ್ಯ ಸಚಿವರಾದ ರವಿಯವರು ಆ ದಿಕ್ಕಿನಲ್ಲಿ ಆಲೋಚನೆ ಮಾಡಬೇಕು. ನಿಮಗೆ ಕೆಲಸ ಮಾಡಬೇಕೆನ್ನುವ ಉತ್ಸಾಹ ಇದೆ. ನೀವು ಕೆಲಸ ಮಾಡುವುದಿಲ್ಲವೆಂದು ಹೇಳದಿದ್ದರೂ, ಆ ಉತ್ಸಾಹದ

ಭರಾಟೆಯಲ್ಲಿ ಇಡೀ ರಾಜ್ಯಾಂಗದ ಆಶಯಕ್ಕೆ ವ್ಯತಿರಿಕ್ತವಾದಂತಹ ಕಾನೂನುಗಳು ಈ ಮನೆಯಲ್ಲಿ ಆಗಕೂಡದು. ಹಣವಿರುವವರು ಸಂವಿಧಾನವನ್ನು, ಕಾನೂನನ್ನು ತಾವು ಹೇಳಿದ ರೀತಿಯಲ್ಲಿ ನಡೆಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ರೀತಿಯಲ್ಲಿ ಈ ಮನೆಯಲ್ಲಿ ಚರ್ಚೆ ಮತ್ತು ಕಾಯಿದೆ ಆಗಬೇಕೆನ್ನುವ ರೀತಿಯಲ್ಲಿ ಸರ್ಕಾರವನ್ನು ನಾನು ಆಗ್ರಹಪಡಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಸಲಹೆಗಳು ಬರುತ್ತಿವೆ. ಹಿಂದಿನ ಉನ್ನತ ಶಿಕ್ಷಣ ಸಚಿವನಾದಂತಹ ಸಂದರ್ಭದಲ್ಲಿ ನಾನು ಎರಡು ವಿಶ್ವವಿದ್ಯಾಲಯಗಳನ್ನು ಇದೇ ಸದನದಲ್ಲಿ ತಂದಿದ್ದೆನು. ಕಾರಣ ಏನೆಂದರೆ ಸ್ಯಾಮ್ ಪಿತ್ರೋಡಾ ರವರು ಒಂದು report ಅನ್ನು ಕೊಟ್ಟಿದ್ದಾರೆ. ಸ್ಯಾಮ್ ಪಿತ್ರೋಡಾ Task Force ಅನ್ನು ಮಾಡಿದ್ದು ನಮ್ಮ ಸರ್ಕಾರ ಅಲ್ಲ, U.P.A. ಸರ್ಕಾರ. ಆಗ ಮಾನ್ಯ ರಾಜೀವ್ ಗಾಂಧಿಯವರು ಇದ್ದರು. ಆ ಸಂದರ್ಭದಲ್ಲಿ ನಮ್ಮ ದೇಶಕ್ಕೆ 1,500 ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ ಎನ್ನುವ ಮಾತನ್ನು ಅವರು ಹೇಳಿದ್ದರು. ಇದನ್ನು ಹೇಳುವ ಸಂದರ್ಭದಲ್ಲಿ ಖಾಸಗಿಯವರು ಮಾಡಬೇಕು ಅಥವಾ ಸರ್ಕಾರ ಮಾಡಬೇಕೆನ್ನುವುದನ್ನು ಹೇಳಿಲ್ಲ. ಈ ದೇಶಕ್ಕೆ ಅಗತ್ಯವಿರುವಂತಹ ವಿವಿಧ ರೀತಿಯ ವಿಶ್ವವಿದ್ಯಾಲಯಗಳು ಬೇಕು. ಉನ್ನತ ಶಿಕ್ಷಣದಲ್ಲಿ enrolment ratio ಬಹಳ ಕಡಿಮೆ ಇದೆ. ಆ ಸಂದರ್ಭದಲ್ಲಿ 7% ಇತ್ತು. ಇವತ್ತಿನ ಪರಿಸ್ಥಿತಿ ನೋಡಿದರೆ ನಾವು 11%ಗೆ ತಲುಪಿದ್ದೇವೆ. Karnataka is far better than other states. ಅಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳು ಬೇಕು ಎನ್ನುವಂತಹ ವಿಚಾರವನ್ನು ಸ್ಯಾಮ್ ಪಿತ್ರೋಡಾ ರಿಪೋರ್ಟ್‌ನಲ್ಲಿ ಹೇಳಿದೆ. ಅದೇ ರೀತಿ ಯಶ್‌ಪಾಲ್ Vs. ಛತ್ತೀಸ್‌ಗಡ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್ ಒಂದು verdict ಅನ್ನು ಕೊಟ್ಟಿದೆ. 37 ವಿಶ್ವವಿದ್ಯಾಲಯಗಳನ್ನು ಒಂದೇ ಕಾನೂನು ಅಡಿಯಲ್ಲಿ ಒಂದು Act ಅನ್ನು ಮಾಡಿ, ಪ್ರತಿ ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರ ಯಾವ ರೀತಿ deemed university ಗಳನ್ನು ಕೊಡುತ್ತದೆ, ಆ ರೀತಿಯಿಂದ ಛತ್ತೀಸ್‌ಗಡ ಸರ್ಕಾರ 37 ಸಂಸ್ಥೆಗಳಿಗೆ ಒಂದು ಆಜ್ಞೆಯಲ್ಲೇ ವಿಶ್ವವಿದ್ಯಾಲಯಗಳನ್ನು ಕೊಟ್ಟಿತು. ಅದರ ವಿರುದ್ಧವಾಗಿ ಪ್ರೊ: ಯಶ್‌ಪಾಲ್‌ರವರು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹಾಕಿ, ಈ ರೀತಿ ಒಂದು ಆರ್ಡರ್‌ನಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ, ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ಅಲ್ಲಿನ ಸದನ ಚರ್ಚೆ ಮಾಡಿ, ವಿಶ್ವವಿದ್ಯಾಲಯಗಳನ್ನು ಕೊಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ತಮಗೆ ಗೊತ್ತಿರುವ ಹಾಗೆ ಮಣಿಪಾಲ್ ವಿಶ್ವವಿದ್ಯಾಲಯಗಳ ಹಿಂದಿನ advertisement ನೋಡಿದರೆ

ಸಿಕ್ಕಿಂ ವಿಶ್ವವಿದ್ಯಾಲಯ ಎಂದು ಬರೆದಿತ್ತು. ಅವರಿಗೆ ಸಿಕ್ಕಿಂ ನಲ್ಲಿ ಅನುಮತಿ ಇದೆ. Whereas ಕರ್ನಾಟಕದಲ್ಲಿ ಬಂದು ಆ ರೀತಿಯ admission ಮಾಡುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಅದನ್ನೂ ಕೂಡ ತಡೆಯಿತು. ಹೀಗಾಗಿ ಕರ್ನಾಟಕ education ನಲ್ಲಿ ಒಂದು pioneer state. ಅಂತಹ ಸಂದರ್ಭದಲ್ಲಿ ಕನಾಟಕದಲ್ಲಿರುವಂತಹ ಖಾಸಗಿ ಸಂಸ್ಥೆಗಳು ಆ ರೀತಿ capitation ಪದ್ಧತಿಯನ್ನು ಯಾರಾದರೂ ಜಾರಿಗೆ ತಂದಿದ್ದಾರೆಂದು ಹೇಳಿದರೆ ಆ credit ನಿಮಗೆ ಕಾಂಗ್ರೆಸ್‌ನವರಿಗೆ ಬರುತ್ತದೆ. ಶಿಕ್ಷಣವನ್ನು ಖಾಸಗೀಕರಣ ಮಾಡಿರುವವರು ಯಾರೆಂದರೆ ಕಾಂಗ್ರೆಸ್‌ನವರು. ಅಂತಹ ಸಂದರ್ಭದಲ್ಲಿ ಇಂತಹ ವಿಶ್ವವಿದ್ಯಾಲಯಗಳು ಬೇಕು. ತಾವು ಹೇಳಿರುವಂತಹ reservation, ಮತ್ತೊಂದಾಗಲಿ, ಅಲ್ಲಿ ಇಡಬೇಕೆನ್ನುವುದರ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳ ಸ್ಪಷ್ಟಪಡಿಸಿ ಹೇಳಿದ್ದಾರೆ. 40% ನಷ್ಟು share ಅನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡಬೇಕು ಮತ್ತು ಮೀಸಲಾತಿಯನ್ನು ಅಳವಡಿಸಬೇಕು ಎಂದು ಈ ಒಂದು ಕಾನೂನುನಲ್ಲಿ ಮಾಡಿದ್ದಾರೆ. ಇವತ್ತು ಕೇಂದ್ರ ಸರ್ಕಾರ deemed university ಎಂದು ಕೊಡುತ್ತಿದ್ದಾರೆ. ಮನಸ್ಸಿಗೆ ಬಂದಾಗ ಕೊಡುತ್ತದೆ, ಮನಸ್ಸಿಗೆ ಬಂದಾಗ ಕಿತ್ತು ಹಾಕುತ್ತದೆ. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಕರ್ನಾಟಕದ ಆರು ಸಂಸ್ಥೆಗಳನ್ನು ಕಿತ್ತು ಹಾಕಿದರು. ಆ ಸಂದರ್ಭದಲ್ಲಿ ಆ ಸಂಸ್ಥೆಯ ಎಲ್ಲಾ ಮುಖ್ಯಸ್ಥರು ನನ್ನನ್ನು ದೂರವಾಣಿ ಮುಖಾಂತರ ಮತ್ತು ವೈಯಕ್ತಿಕವಾಗಿ ಭೇಟಿ ಮಾಡಿ ಹೇಳಿದ್ದೇನೆಂದರೆ, ಬೇರೆ ರಾಜ್ಯಗಳವರು ಶಿಕ್ಷಣದಲ್ಲಿ ಈ ರೀತಿ ಮುಂದೆ ಹೋಗುತ್ತಿದ್ದಾರೆ, ಖಾಸಗಿ ವಿಶ್ವವಿದ್ಯಾಲಯಗಳಿಗೆ ನೀವು ಅನುಮತಿಯನ್ನು ಕೊಡಬೇಕು, ಅದಕ್ಕೆ yardstick, guidelines ಮಾಡಿ, ಇಂತಿಂಥಾದ್ದು ಇರಬೇಕೆಂದು ನಾವು prepare ಮಾಡಿಕೊಳ್ಳುತ್ತೆವೆನ್ನುವಂತಹ ಮಾತನ್ನು ಹೇಳಿದಾಗ Karnataka Higher Education Council ಮುಖಾಂತರವಾಗಿ ಏನೇನು conditions ಇರಬೇಕೆಂದು ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆ guidelines ಆಧಾರದ ಮೇಲೆ ಅವರ local inspection ಆದನಂತರ ಅಲ್ಲಿರುವಂತಹ experts ಜೊತೆಗೆ ಚರ್ಚೆಯಾದ ನಂತರ Cabinet ಗೆ ಬಂದು ಈಗ ಪ್ರತಿ ವಿಶ್ವವಿದ್ಯಾಲಯಕ್ಕೂ ಸುಪ್ರೀಂ ಕೋರ್ಟ್‌ನ ಆಜ್ಞೆ ಪ್ರಕಾರ ಈ ಸದನಕ್ಕೆ ಬರಬೇಕಾಗುತ್ತದೆ. ಹಾಗಾಗಿ ಇವುಗಳನ್ನು ನಾಯಿ ಕೊಡೆಗಳಂತೆಯಾಗಲಿ, ಮತ್ತೊಂದು ರೀತಿಯಲ್ಲಿ ಬರುತ್ತವೆಂದರೆ, ಆ ರೀತಿ ಕೊಡುವ ಉದ್ದೇಶವಿಲ್ಲ. ವಿಪ್ರೋರವರ ವಿಚಾರವನ್ನು ಮಾನ್ಯ ಉಪನಾಯಕರಾದ ಜಯಚಂದ್ರರವರು

ಪ್ರಸ್ತಾಪ ಮಾಡಿದರು. ಕರ್ನಾಟಕದ ಮೊದಲನೇ ಖಾಸಗಿ ವಿಶ್ವವಿದ್ಯಾಲಯ ಯಾವುದೆಂದರೆ ವಿಪ್ರೋ ಸಂಸ್ಥೆಗೆ ಕೊಟ್ಟಿರತಕ್ಕಂಥ ವಿಶ್ವವಿದ್ಯಾಲಯ. ಅದು ಒಂದು alliance ವಿಶ್ವವಿದ್ಯಾಲಯ, management ವಿಶ್ವವಿದ್ಯಾಲಯ. ಅದು ಇಡೀ ಜಗತ್ತಿನಲ್ಲಿ ಏಳನೇ ಸ್ಥಾನದಲ್ಲಿದೆ. ಆ ರೀತಿ ಉನ್ನತ ಶಿಕ್ಷಣದಲ್ಲಿ ಸೇವೆ ಮಾಡುತ್ತಿರುವಂತಹ enrollment ratio ಅನ್ನು ಜಾಸ್ತಿ ಮಾಡಬಲ್ಲಂತಹ ವಿಶ್ವವಿದ್ಯಾಲಯಗಳ ಅವಶ್ಯಕತೆ ನಮ್ಮ ರಾಜ್ಯಕ್ಕೆ ಇದೆ. ಆ ಸಂಸ್ಥೆಗಳಲ್ಲಿ yardstick ಇಡುವ ಸಂದರ್ಭದಲ್ಲಿ ಆಚೆ-ಈಚೆ ಆಗಿದ್ದರೆ, ಇದೇ ಸದನದಲ್ಲಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ಹಾಗಾಗಿ ನಾವು ಉನ್ನತ ಶಿಕ್ಷಣಕ್ಕೆ encourage ಮಾಡುವಂತಹ ಅವಶ್ಯಕತೆ ಇದೆ. ಅದನ್ನು ಒಂದು ಸಂಸ್ಥೆ ಎನ್ನುವ ಒಂದೇ ಉದ್ದೇಶದಿಂದ ನೋಡದೆ, ಉನ್ನತ ಶಿಕ್ಷಣದ enrollment ratio, ಉನ್ನತ ಶಿಕ್ಷಣದ quality ಬಗ್ಗೆ, ಅಲ್ಲಿರುವಂತಹ ವಿಷಯಗಳ ಬಗ್ಗೆ ಆಸಕ್ತಿಯನ್ನು ವಹಿಸಿ ಅನುಮತಿಯನ್ನು ನೀಡಿದರೆ ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣದಲ್ಲಿ ನಾವು quality education ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಾವು enrollment ratio ಕೂಡ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. Disparties ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. Fees ಒಂದು ಕಡೆ ಹೆಚ್ಚಿರಬಹುದು, ಇನ್ನೊಂದು ಕಡೆ ಕಡಿಮೆಯಿರಬಹುದು. ಮಾನ್ಯ ಬಂಡೆಪ್ಪ ಖಾಶಂಪೂರ್‌ರವರು ಹೇಳಿದ ಹಾಗೆ hostel ಗಳ fees ಜಾಸ್ತಿಯಿರಬಹುದು, ಇದನ್ನೆಲ್ಲಾ ನಿಯಂತ್ರಣ ಮಾಡುವುದಕ್ಕೆ Act ನಲ್ಲಿ ಅವಕಾಶವಿದೆ. ಪ್ರತಿಯೊಂದು ಆಕ್ಟ್‌ನಲ್ಲಿ ಆ ರೀತಿ ಅವಕಾಶಗಳನ್ನು ಕೊಟ್ಟರೆ ನಿಶ್ಚಿತವಾಗಿ ನಾವು ಅದನ್ನು ತಡೆಯಬಹುದು. ಈ ರೀತಿ ಶಿಕ್ಷಣಕ್ಕೆ encourage ಕೊಡುವಂತಹ, ಶಿಕ್ಷಣದ ಒಂದು ಹಬ್ಬ ಎಂದು ಹೇಳುವಂತಹ ಕರ್ನಾಟಕ ರಾಜ್ಯಕ್ಕೆ ಎಲ್ಲಾ ವಿಶ್ವವಿದ್ಯಾಲಯಗಳ ಅವಶ್ಯಕತೆಗಳು ಇವೆ. ದಯವಿಟ್ಟು ಮಾನ್ಯ ಸದಸ್ಯರು ಸಹಕರಿಸುತ್ತಾರೆ ಎಂದು ಭಾವನೆ.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಹಿಂದಿನ ಶಿಕ್ಷಣ ಸಚಿವರು ಕೆಲವು ವಿವರಗಳನ್ನು ಕೊಟ್ಟರು. ಸ್ಯಾಮ್ ಪಿತ್ರೋಡಾರವರು ಒಬ್ಬ intellectual ಇದ್ದಾರೆ. ಅವರು ಸಿ ಡಾಟ್ ನಲ್ಲಿ ದೊಡ್ಡ ಸುಧಾರಣೆಯನ್ನು ಮಾಡಿ every six men in the country, ಆ ರೀತಿಯಾಗಿ ಇವತ್ತು 60 ಕೋಟಿ ಜನ mobile use ಮಾಡುತ್ತಿದ್ದಾರೆ. He brought a big revolution. That is a different thing. ಇವತ್ತು Human Resources

Development Ministry deemed university ಗೆ ಕೊಟ್ಟರು. Deemed University ಸಮರ್ಪಕವಾಗಿ ಕೆಲಸ ಮಾಡದಿರುವುದಕ್ಕೆ it has not yet been taken back. ಅದು ನಿಮಗೆ ಗೊತ್ತಿದೆ. ಏನು ನೋಡಿ decision ಮಾಡಿದರು, Deemed University ಗೆ ಎಷ್ಟು ಕೊಟ್ಟರು, ಮತ್ತೆ ಬೇಡ ಎಂದು ಏಕೆ ತೆಗೆದುಕೊಂಡರು? ಅದೇ ರೀತಿ ದುಡ್ಡು ಇರುವವರು ತೆಗೆದುಕೊಂಡರೆ, ನೀವು ಕೊಡಲೇಬೇಡಿ ಎಂದು ನಾನು ಹೇಳುವುದಿಲ್ಲ. Higher Education Department ನಲ್ಲಿ SC/ST ಮಕ್ಕಳಿಗೆ ಎಷ್ಟು ಪರ್ಸೆಂಟ್ ದುಡ್ಡು ಖರ್ಚು ಮಾಡಿದ್ದೀರಿ? Not even 4-8%. Take out the Budget and see. Tell me tomorrow. ನೀವು ಸರ್ಕಾರದಲ್ಲಿ ಇಟ್ಟುಕೊಂಡು ಖರ್ಚು ಮಾಡದೇ ಹೋದರೆ ಖಾಸಗಿಯವರಿಗೆ ಕೊಟ್ಟುಬಿಟ್ಟು ನೀವು ಏನೂ strealine ಮಾಡದೇ common ಆಗಿ ಇವತ್ತು fees structure ಅನ್ನು hostelನಲ್ಲಿ ಮತ್ತು ಬೇರೆ ಬೇರೆ ಕಡೆ ಮಾಡದೇ ಕೊಟ್ಟುಬಿಟ್ಟು, ಆಮೇಲೆ ನೋಡೋಣ ಎಂದರೆ ನಿಮ್ಮ ಮಾತು ಕೇಳುತ್ತಾರಾ? ಅವರು ಕೇಳುತ್ತಾರೆ ಎಂದು ನಿಮಗೆ ಅನಿಸುತ್ತದೆಯೇ? ಅವರು ನಿಮ್ಮ ಮಾತನ್ನು ಕೇಳುತ್ತಾರೆಂದು ಅನಿಸುತ್ತದೆಯೇ? ಅದಕ್ಕೆ ನೀವು ಕೂಡಲೇ ಬೇಡಿ, ಸಾಧ್ಯವಿಲ್ಲವೆಂದು ವಾದ ಮಾಡುತ್ತಿಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮೀಸಲಾತಿಯಿಂದ ಸಂತೋಷವಾಗಿಲ್ಲ, ಎಲ್ಲಿಯವರೆಗೂ ಜನರು ಅಧಿಕಾರದ ನಿರ್ಣಾಯಕ ಸ್ಥಳಕ್ಕೆ ಬರುವುದಿಲ್ಲವೋ, ಅಲ್ಲಿಯವರೆಗೂ ನನಗೆ ಸಂತೋಷವಿಲ್ಲವೆಂದು ಹೇಳಿದ್ದಾರೆ. ಜನರು ಅಧಿಕಾರದ ನಿರ್ಣಾಯಕ ಸ್ಥಳಕ್ಕೆ ಬರಬೇಕಾದರೆ higher education is a must. ಈಗ ಕೊಡುವಾಗ, ಸಂವಿಧಾನದ ಆಶಯ ಆ ರೀತಿ ಇರುವಾಗ ನೀವು ಅದಕ್ಕನುಗುಣವಾಗಿ ಕೆಲಸ ಮಾಡದೇ ಇದ್ದರೆ, there will be disparity, unequal society. There is an imbalance. ಆ ರೀತಿ ಆದಾಗ country will not prosper. ಇವೆಲ್ಲವನ್ನು ದೂರ ದೃಷ್ಟಿಯಲ್ಲಿಟ್ಟುಕೊಂಡು ಒಂದು streamline ಮಾಡಿ, proper policy evolve ಮಾಡಿ, ಆ ರೀತಿಯ ಒಂದು ಸದುದ್ದೇಶವನ್ನಿಟ್ಟುಕೊಂಡು ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಹಿಂದೆ ಸುಮಾರು ಕಾಲೇಜುಗಳನ್ನು ಕೊಟ್ಟಿದ್ದಾರಲ್ಲವೇ, ಇವರು ನಿಮ್ಮ ಕಾನೂನು ಅನ್ನು ಪಾಲನೆ ಮಾಡುತ್ತಿದ್ದಾರೋ, ಇಲ್ಲವೋ ಎಂಬುದನ್ನು ನೋಡಲು ತಾವು ನಮ್ಮನ್ನು ಒಂದು ಸಾರಿ ಅಲ್ಲಿಗೆ ಕರೆದುಕೊಂಡು ಹೋದರೆ ನೋಡುತ್ತೇವೆ. ತಾವು ಏನು

ನಿಬಂಧನೆಗಳನ್ನು ಹಾಕಿದ್ದೀರಿ, ಅವರು ಆ ನಿಬಂಧನೆಗಳಿಗೆ ಒಳಪಟ್ಟಿದ್ದಾರೆಯೇ, ಇಲ್ಲವೇ ಎನ್ನುವಂಥದ್ದನ್ನು ನೋಡುತ್ತೇವೆ. ಎರಡನೆಯದಾಗಿ, ತಾವು Government seatಗಳನ್ನು40% ಕೊಡಬೇಕೆಂದು ಏನು ಹೇಳಿದ್ದೀರಿ. ಅಲ್ಲಿಗೆ ಹೋಗತಕ್ಕಂಥವರು ಬಡವರ ಮಕ್ಕಳು, ಇವರು ಅಲ್ಲಿ ಶ್ರೀಮಂತರ ಮಕ್ಕಳಿಗೆ ಹಾಸ್ಟೆಲ್‌ಗಳನ್ನು ಮಾಡತಕ್ಕಂಥದ್ದು. ಅಲ್ಲಿ ಅವರೇ ಹಾಸ್ಟೇಲ್ fee ಯನ್ನು 2 ಲಕ್ಷ, 3 ಲಕ್ಷ, 4 ಲಕ್ಷ ರೂ.ಗಳನ್ನು ಕೊಡಿಯೆಂದು fix ಮಾಡುತ್ತಾರೆ. ತಾವು ಬಡವರ ಮಕ್ಕಳಿಗೆ ಯಾವ ರೀತಿ ಮಾಡುತ್ತೀರಿ? ಅವರಿಗೆ ಸರ್ಕಾರದವರೆ ಏನಾದರೂ ಭರಿಸುತ್ತೀರಾ? ಅವರು ಓದುವುದಕ್ಕೆ ಏನೋ ಕಾಲೇಜಿಗೆ ಹೋಗುತ್ತಾರೆ, ಅಲ್ಲಿ ಅವರು ಹಾಸ್ಟೇಲ್‌ನಲ್ಲಿ ಇರಬೇಕಲ್ಲಾ? ಅವರು ಯಾವ ರೀತಿ ಶ್ರೀಮಂತರ ಮಕ್ಕಳ ಜೊತೆಯಲ್ಲಿ ಇರುತ್ತಾರೆ, ಅದಕ್ಕೆ ತಾವು ಏನಾದರೂ ನಿಬಂಧನೆಯನ್ನು ಹಾಕುತ್ತೀರಾ? ದಯಮಾಡಿ ಸರ್ಕಾರದವರೂ ಅದಕ್ಕೆ ಹಣವನ್ನು ಪಾವತಿ ಮಾಡಬೇಕು, ಇಲ್ಲವೆಂದರೆ ಇಷ್ಟು ಹಣವನ್ನು collect ಮಾಡಬೇಕೆಂದು ನಿಬಂಧನೆಯನ್ನು ಹಾಕಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಅರವಿಂದ ಲಿಂಬಾವಳಿಯವರು ಸಹ ಕೆಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲಿದರು. ಈ ಖಾಸಗಿ ವಿಶ್ವವಿದ್ಯಾಲಯಗಳು ಸಂವಿಧಾನದ ಪರಿಧಿಯೊಳಗೆ ರೂಪುಗೊಳ್ಳುತ್ತಿರುವಂಥದ್ದು, ಇದು ಸಂವಿಧಾನ ಪರಿಧಿಯನ್ನು ಬಿಟ್ಟು ಅಲ್ಲ. ಸರ್ಕಾರ ಒಂದು ರೂಪಾಯಿ ಹಣವನ್ನು invest ಮಾಡದೇ 40% ಜನರಿಗೆ ಸರ್ಕಾರದ ಕಡೆಯಿಂದ ಬಡವರಿಗೆ ಮತ್ತು merit ಇರುವಂಥವರಿಗೆ ನ್ಯಾಯ ಕೊಡಿಸುವಂಥ ಕೆಲಸವನ್ನು ಮಾಡುತ್ತಿದೆ. ಈಗ ರಾಜಸ್ಥಾನದಲ್ಲಿ ನಮ್ಮ ಪಕ್ಷದ ಸರ್ಕಾರವಿಲ್ಲ, 33 ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಟ್ಟಿದೆ. State quota 15%. Endowment fund ಎರಡೂವರೆ ಕೋಟಿ ರೂ.ಗಳು, ಉತ್ತರ ಪ್ರದೇಶದಲ್ಲಿ 17 ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಟ್ಟಿದೆ, ಅಲ್ಲಿ 0% ಇದೆ. ನಾನು ಯಾವುದನ್ನು study ಮಾಡದೇ ಹೇಳಿಲ್ಲ, ತಮಗೆ ಮಾಹಿತಿ ಇರಲಿ ಎಂದು ಹೇಳುತ್ತಿದ್ದೇನೆ. ಇದರಲ್ಲಿ ಎಷ್ಟು ನ್ಯಾಯ ಕೊಡುವುದಕ್ಕೆ ಸಾಧ್ಯವಿದೆಯೆಂಬುದರಲ್ಲಿ ನನಗೆ ಎರಡು ದಾರಿ ಇತ್ತು, ಒಂದು ವಿಪರೀತ condition ಗಳನ್ನು ಹಾಕಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭವಾಗದೇ ಇರುವ ಹಾಗೆ ನೋಡಿಕೊಳ್ಳುವುದು, ನಿರ್ಬಂಧ ಮಾಡುವುದು, ಇಲ್ಲ, ಎಷ್ಟು ನ್ಯಾಯ ಕೊಡಿಸುವುದಕ್ಕೆ ಸಾಧ್ಯವಿದೆ, ಅಷ್ಟೂ ನ್ಯಾಯ ಕೊಡಿಸುವಂಥ

ಕೆಲಸವನ್ನು ಮಾಡುವಂಥದ್ದು. ಇದರಲ್ಲಿ ನಾನು ಎರಡನೆಯದನ್ನು ಆರಿಸಿಕೊಂಡಿದ್ದೇನೆ. ನನಗೂ ನೂರಕ್ಕೆ ನೂರು ಜನರಿಗೆ ನ್ಯಾಯ ಕೊಡಿಸಬೇಕೆಂಬ ಆಸೆ ಇದೆ. ಆದರೆ ವಾಸ್ತವಿಕವಾಗಿ ಅವರು ವಿಶ್ವವಿದ್ಯಾಲಯವನ್ನೇ ತೆರೆಯದಿದ್ದರೆ, ನಾವು 1% ಜನರಿಗೂ ನ್ಯಾಯವನ್ನು ಕೊಡಿಸುವುದಕ್ಕೆ ಸಕಾರದ ಹಣವಿಲ್ಲದೇ ಆಗುವುದಿಲ್ಲ. ತಾವು ಯೋಚನೆ ಮಾಡಿ, ನಮ್ಮ ಸಮ್ಮಿಶ್ರ ಸರ್ಕಾರ ಬರುವವರೆಗೂ ಇಡೀ ರಾಜ್ಯದಲ್ಲಿ ಇದ್ದಂಥ ಗೌರ್ನಮೆಂಟ್ ಇಂಜಿನೀಯರಿಂಗ್ ಕಾಲೇಜು ಒಂದೇ ಇದ್ದದ್ದು. ಕಳೆದ ಆರು ವರ್ಷಗಳವರೆಗೂ ಇಡೀ ರಾಜ್ಯದಲ್ಲಿ ಗೌರ್ನಮೆಂಟ್ ಇಂಜಿನಿಯರಿಂಗ್ ಕಾಲೇಜು ಒಂದೇ ಇತ್ತು. Private Engineering college 181 ಇತ್ತು, social justice ಇರಬೇಕೆಂಬ ಇಚ್ಛೆ ಇರುವವರು 50 ವರ್ಷಗಳ ಹಿಂದೆ ಇಂಜಿನಿಯರಿಂಗ್ ಕಾಲೇಜು ಅನ್ನು ತೆಗೆದಿದ್ದರೆ, ತಾಲ್ಲೂಕಿಗೆ ಒಂದು ಇಂಜಿನಿಯರಿಂಗ್ ಕಾಲೇಜ್ ಅನ್ನು ತೆಗೆದಿದ್ದರೆ, ಅಂದರೆ ವಾಸ್ತವಿಕ ಸ್ಥಿತಿಯಲ್ಲಿ ಇಡೀ ಜಗತ್ತಿನಲ್ಲಿ ಭಾರತದ ಇಂಜಿನಿಯರ್‌ಗಳು ಇರುತ್ತಿದ್ದರು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಯವರನ್ನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅವರು ಒಂದೇ ಒಂದು ಇಂಜಿನಿಯರಿಂಗ್ ಕಾಲೇಜ್ ಇತ್ತೆಂದು ಹೇಳಿದರಲ್ಲಾ, ಅದರಲ್ಲಿ ಯಾವ್ಯಾವ course ಗಳಿತ್ತೆಂಬುದನ್ನು ಹೇಳಲಿ, ಅಲ್ಲಿ ಬಡವರ ಮಕ್ಕಳು ಓದುವಂಥ course ಇತ್ತಾ? ಅಲ್ಲಿ ಒಂದು ರೇಷ್ಮೆ ಇಲಾಖೆ ಇತ್ತೆಂದು ಹೇಳಿ, ತಾವು ದಯಮಾಡಿ ಅಲ್ಲಿ ಯಾವ course ಇತ್ತೆಂಬುದನ್ನು ಹೇಳಿ, ಕಳೆದ 50 ವರ್ಷಗಳಿಂದ ಯಾವ course ಇತ್ತೆಂಬುದನ್ನು ಹೇಳಿ ಮಾನ್ಯ ಕುಮಾರಸ್ವಾಮಿಯವರು ಬಂದಮೇಲೆ 8 ಕಾಲೇಜುಗಳಾಗಿದೆಯೆಂಬುದನ್ನು ಹೇಳಿ.

ಶ್ರೀ ಸಿ.ಟಿ.ರವಿ : ಮಾನ್ಯ ಶಂಕರಮೂರ್ತಿಯವರು Higher Education Minister ಆದಮೇಲೆ ಅವರು 8 ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟರು. ಮಾನ್ಯ ಶಂಕರಮೂರ್ತಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದರು.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ರವಿಯವರು ಹೇಳುವುದಕ್ಕೂ ಅವರು ಹೇಳುವುದಕ್ಕೂ ಏನೂ ವ್ಯತ್ಯಾಸವಿಲ್ಲ. ಅವರು ಸ್ವಾರ್ಥಿಗಳು ಕುಮಾರಣ್ಣ ಎಂದು ಹೇಳಿದರು, ಮಾನ್ಯ ರವಿಯವರು ಸಮ್ಮಿಶ್ರ ಸರ್ಕಾರವೆಂದು ಹೇಳಿದರು.

ಶ್ರೀ ಸಿ.ಟಿ.ರವಿ : ನಾನು ಸಮ್ಮಿಶ್ರ ಸರ್ಕಾರವೆಂದು ಹೇಳಿದ್ದೇನೆ. 100%ನಲ್ಲಿ ನಿಮಗೂ 50% credit ಕೊಟ್ಟಿದ್ದೇನೆ. ಮಾನ್ಯ ಕುಮಾರಸ್ವಾಮಿ–ಯವರು ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ಶಂಕರಮೂರ್ತಿಯವರು ಉನ್ನತ ಶಿಕ್ಷಣ ಸಚಿವರಾಗಿ ಇದ್ದಾಗ ಆಗಿದ್ದು. ನಾನು ರಾಜಕೀಯ ಬೆರೆಸುವುದಕ್ಕೆ ಹೋಗುವುದಿಲ್ಲ, ವಾಸ್ತವ ಸ್ಥಿತಿ ಏನು ಇತ್ತು, ಅದನ್ನು ಹೇಳುವ ಕೆಲಸವನ್ನು ಮಾಡಿದೆ. ಹಾಗಾಗಿ ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡು ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಬಂಡವಾಳ ಏನು ಇಲ್ಲದೇ, ನಮ್ಮ ರಾಜ್ಯದ 40% ಮಕ್ಕಳಿಗೆ ಕಡಿಮೆ fees ನಲ್ಲಿ fee fixation ಮುಂಚೆ Management ಗೆ ಅಧಿಕಾರವಿತ್ತು. ನಾವು ಈಗ ಸರ್ಕಾರ ನೇಮಕ ಮಾಡುವಂಥ retired High Court ಅಥವಾ Supreme Court Judge ಗಳ ನೇತೃತ್ವದ ಕಮಿಟಿ ಎಂದು ಹೇಳಿದ್ದೇನೆ. ಈಗ ಎಲ್ಲಾ ವ್ಯಕ್ತಿಗಳು ಮೋಸ ಮಾಡುತ್ತಾರೆಂದು ಅಲ್ಲ. ನಾವು ವ್ಯವಸ್ಥೆಯನ್ನು ಬಿಗಿಯಾಗಿ ಮಾಡಿರುತ್ತೇವೆ. ಅದನ್ನು ಚಲಾವಣೆ ಮಾಡುವವರ ಇಚ್ಛಾಶಕ್ತಿಯ ಮೇಲೆ ಆ ವ್ಯವಸ್ಥೆ ಯಾವ ರೀತಿ ನಡೆದುಕೊಂಡು ಹೋಗುವಂಥದ್ದು, ನಮ್ಮ ವ್ಯವಸ್ಥೆ ಮತ್ತು ಕಾನೂನುಗಳು ಬಿಗಿಯಾಗಿರುತ್ತವೆ. ಅದನ್ನು ಚಲಾವಣೆ ಮಾಡುವವರು ಹೇಗೆಂಬುದನ್ನು ನೋಡಬೆಕಾಗುತ್ತದೆ. ಇದನ್ನು ಚಲಾವಣೆ ಮಾಡುವವರನ್ನು ಒಳ್ಳೆಯ ರೀತಿಯಲ್ಲಿ ತರುವ ಶಕ್ತಿ ನಮಗೆ ಅಂದರೆ ಸರ್ಕಾರಕ್ಕೆ ಇರುವುದು.ಇವತ್ತು ನಾವು ಇರಬಹುದು, ನಾಳೆ ದಿವಸ ನೀವು ಬರಬಹುದು. ನಾವು ಹೇಗೆ ನಡೆಸಿಕೊಂಡು ಹೋಗುತ್ತೇವೆನ್ನುವುದರ ಮೇಲೆ ನಡೆದುಕೊಂಡು ಹೋಗುತ್ತದೆ. ಹಾಗಾಗಿ ಇದನ್ನು ಸದುದ್ದೇಶದಿಂದ, ದೂರದೃಷ್ಟಿಯನ್ನಿಟ್ಟುಕೊಂಡು ಈ ಯೋಚನೆ ಮಾಡಿದ್ದೇವೆ. ಇನ್ನು ಹಾಸ್ಟೆಲ್ ಬಗ್ಗೆ ಕೇಳಿದ್ದಾರೆ, ಇದು ಈ Act ಒಳಗೆ ಬರುವಂಥ ವ್ಯವಸ್ಥೆ ಅಲ್ಲ. ಹಾಸ್ಟೆಲ್ ಬಗ್ಗೆ ಸರ್ಕಾರ ಇಲ್ಲಿ ಓದುವುದಕ್ಕೆ ಬರುವ ಮಕ್ಕಳ ಬಗ್ಗೆ ದೃಷ್ಟಿಯಲ್ಲಿಟ್ಟುಕೊಂಡು ಯೋಚನೆ ಮಾಡುವಂಥ ಅವಶ್ಯಕತೆ ಇದೆ, ಇದರ ಬಗ್ಗೆ ಬೆಳಕು ಚೆಲ್ಲುವಂಥ ಕೆಲಸವಾಗಿದ್ದು, ನಾನು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮತ್ತು ಸಮಾಜ ಕಲ್ಯಾಣ ಸಚಿವರೊಂದಿಗೂ ಸಮಾಲೋಚನೆ ಮಾಡುತ್ತೇನೆ. ಈಗ ಅಗತ್ಯವಿರುವಂಥ ಹಾಸ್ಟೆಲ್‌ಗಳನ್ನು ಆದ್ಯತೆಯ ಆಧಾರದಲ್ಲಿ ತೆರೆದು, ತಾವು ಹೇಳಿದ ನಿಟ್ಟಿನಲ್ಲಿ ಸೀಟು ಸಿಕ್ಕಿದರೂ ಕೂಡ ಅವರಿಗೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕಾದರೆ ಈ Act ನಲ್ಲಿ ಅದು ಬರುವುದಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಶ್ರೀಮಂತ ಮಕ್ಕಳು ಒಳಗೆ ಇರುತ್ತಾರೆ, ಇವರು ಗೇಟ್ ಹೊರಗೆ ಇರುತ್ತಾರೆ, ಇವರನ್ನೂ ಒಳಗೆ ತನ್ನಿ, ಅವರ ಜೊತೆಯಲ್ಲೆ ಇವರು ಇರಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ : ಬಡವರ ಮಕ್ಕಳಿಗೆ ಸರ್ಕಾರವೇ pay ಮಾಡಲಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳ ಕಳಕಳಿಯ ಬಗ್ಗೆ ನನಗೆ ಗೌರವವಿದೆ. ಆದರೆ ಹೊರಲಿಕ್ಕೆ ಆಗದೇ ಇರುವ ಭಾರವನ್ನು ಹೊರಿಸುವುದಕ್ಕೆ ಹೋದರೆ ಅಥವಾ University Act ಬೇಡವೆಂದು ಹೇಳುವಂಥದ್ದು ಬಹಳ ಸುಲಭ.

ಶ್ರೀ ಬಂಡೆಪ್ಪ ಖಾಶೆಂಪೂರ್ : ತಾವು ಇಷ್ಟೆಲ್ಲಾ ಮಾಡಿ ಅಷ್ಟು ಮಾಡಿದರೆ ಹೆಸರು ಬರುತ್ತದೆಂದು ಹೇಳುತ್ತಿದ್ದೇವೆ, ಒಳ್ಳೆಯದಾಗುತ್ತದೆ.

ಶ್ರೀ ಸಿ.ಟಿ.ರವಿ : ಈಗ 0% ಇರುವಂಥದ್ದನ್ನು 40%ಗೆ ತಂದಿದ್ದೇವೆ, ಮುಂದೆ ಅದನ್ನು ತರುವ ಬಗ್ಗೆ ಯೋಚನೆ ಮಾಡೋಣ. ಈ Actನಲ್ಲಿ ಅದನ್ನು ತರುವುದಕ್ಕೆ provision ಇಲ್ಲ, ಈ Actನಲ್ಲಿ Knowledge Commission Guidelines ಇದೆ, ಈ Actನಲ್ಲಿ ಅದನ್ನು ತರುವುದಕ್ಕೆ ಆಗುವುದಿಲ್ಲ. ಮತ್ತೆ quality education maintain ಮಾಡುವುದಕ್ಕೆ AICTE Guidelines ಅವರು ಕಡ್ಡಾಯವಾಗಿ follow ಮಾಡಬೇಕು, ಸರ್ಕಾರದ ಅನುಮತಿಯನ್ನು ಪಡೆಯಬೇಕು. University Bill ಬರುತ್ತಿದ್ದ ಹಾಗೆ ಮುಗಿದು ಹೋಗುವುದಿಲ್ಲ. Medical college ಅನ್ನು ತೆಗೆಯಬೇಕೆಂದರೆ MCI Guidelines follow ಮಾಡಬೇಕು.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಇವರು ಒಂದು ಕಡೆ ಖಾಸಗಿಯವರೆಂದು ಹೇಳುತ್ತಾರೆ, ಇವರು ಏನು ಮನೆಯಿಂದ ಹಣವನ್ನು ತರುತ್ತಾರೆಯೆ? ಇದನ್ನು ಬೆಳೆಸಿ, ಇದರ ಮೇಲೆ ಲಾಭ ಮಾಡುತ್ತಾರೆ. ಒಬ್ಬೊಬ್ಬರು ಎರಡು ವರ್ಷ ಟೀಚರ್ ಆಗಿ ಇದ್ದವರು, ಕೋಟ್ಯಂತರ ರೂ.ಗಳ school buildingಗಳನ್ನು ಮಾಡಿದ್ದಾರೆ. ಇವರು ಯಾರ ಹಣದಿಂದ ಮಾಡಿದ್ದಾರೆ? ಆ ಮಕ್ಕಳ ಹಣದಿಂದ ಮಾಡುತ್ತಿದ್ದಾರೆ. ಹಾಗಾಗಿ ಮಾನ್ಯ ಮಂತ್ರಿಯವರೆ, ಇದು business ಆಗಿದ್ದು. ಅದಕ್ಕೆ ನಾವು ನ್ಯಾಯ ಕೊಡಲಾರದೇ weaker section reservation ಕೊಟ್ಟಂಥ ಜನರಿಗೆ ತಾವು ನಿಜಕ್ಕೂ ಬದ್ಧತೆಯನ್ನು ತೋರಿಸಿ. ಒಂದು ಲಕ್ಷ ಹದಿನೇಳು ಸಾವಿರ ಕೋಟಿ

ರೂ.ಗಳ ಬಜೆಟ್ ಅನ್ನು ಮಂಡನೆ ಮಾಡಿ, ಆ ಬಡವರ ಮಕ್ಕಳಿಗೆ ಹಾಸ್ಟೆಲ್‌ನಲ್ಲಿ ಸೀಟು ಭರಿಸುವುದಕ್ಕೆ ಆಗುವುದಿಲ್ಲವೆಂದರೆ, ಇನ್ನೇನು ಮಾಡುತ್ತೀರಿ?

ಶ್ರೀ.ಸಿ.ಟಿ.ರವಿ : ಈ Act ನಲ್ಲಿ ಬರುವುದಿಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್ : ತಾವು Act ನಲ್ಲಿ ಬರುವುದಿಲ್ಲವೆಂದರೆ, ಅವರಿಗೆ reservation ಕೊಡುವುದರಲ್ಲಿ ಏನು ಅರ್ಥವಿದೆ?

ಶ್ರೀ.ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಈ Act ನಲ್ಲಿ ಬರುವುದಿಲ್ಲ. ಬೇಕಾದರೆ ಬಜೆಟ್‌ನಲ್ಲಿ ಹೇಳಲಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಬಜೆಟ್‌ನಲ್ಲಿ ಅಲ್ಲ, ತಾವು reservation ಕೊಡುವುದರಲ್ಲಿ ಏನು ಅರ್ಥವಿದೆ? ದಯವಿಟ್ಟು ಇದರ ಬಗ್ಗೆ ಬೆಳಕು ಚೆಲ್ಲಬೇಕು, ಮತ್ತೆ ಅನುಕೂಲ ಮಾಡಿಕೊಡಬೇಕು. ಇವತ್ತು ನಾನು ಮಾನ್ಯ ಮಂತ್ರಿಯವರಿಗೆ challenge ಮಾಡುತ್ತೇನೆ. ಎಲ್ಲಾ ಕಡೆ ಈ ರೀತಿ ಅವ್ಯವಹಾರಗಳು ಆಗುತ್ತದೆ. ಅದು fees collect ಮಾಡುವಂಥದ್ದು ಒಂದು ಎರಡನೆಯದು building donation, ಶ್ರೀಮಂತರ ಮಕ್ಕಳ ಜೊತೆಯಲ್ಲಿ ಇವರು ಯಾರು ಹೋಗಿ ಇರುವುದಕ್ಕೆ ಆಗುವುದಿಲ್ಲ. ಇವೆಲ್ಲಾ ತಾರತಮ್ಯವಾಗುತ್ತದೆ, ಆದುದರಿಂದ ದಯವಿಟ್ಟು ಇದರ ಮೇಲೆ ಬೆಳಕು ಚೆಲ್ಲಬೇಕೆಂದು ಮತ್ತೊಮ್ಮೆ ಆಗ್ರಹ ಮಾಡುತ್ತೇನೆ.

ಶ್ರೀ ನೆ.ಲ.ನರೇಂದ್ರ ಬಾಬು : ಮಾನ್ಯ ರವಿಯವರ ವಾದ ಹೇಗಿದೆಯೆಂದರೆ, ಆಶೋಕ ಹೋಟೆಲ್‌ನಲ್ಲಿ ಬಡವರಿಗೆ 40% ಮೀಸಲಾತಿ ಎನ್ನುವ ಹಾಗೆ ಇದೆ.

ಶ್ರೀ ಎನ್. ಸಂಪಂಗಿ : 85–90% ಇರುವಂಥ ಮಕ್ಕಳನ್ನು ಮಾತ್ರ ಅಡ್ಮಿಷನ್ ಮಾಡಿಕೊಳ್ಳುತ್ತಾರೆ. 35–40% ಇರುವಂಥ ಮಕ್ಕಳಿಗೆ ಯಾರಿಗೂ ಅಲ್ಲಿ ಅಡ್ಮಿಷನ್ ಕೊಡುವುದಿಲ್ಲ.

ಶ್ರೀ.ಸಿ.ಟಿ.ರವಿ : ಸರ್ಕಾರ ನಿಗದಿ ಮಾಡುವಂಥದ್ದೇ ರಿಸರ್ವೇಷನ್.

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ" ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಅಧ್ಯಕ್ಷರು:– ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2 ರಿಂದ 61 ರವರೆಗೆ

ಅಧ್ಯಕ್ಷರು : 2 ರಿಂದ 61 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.
2 ರಿಂದ 61 ರವರೆಗಿನ ಖಂಡಗಳು (ಎರಡೂ ಸೇರಿದಂತೆ) ವಿಧೇಯಕದ ಅಂಗವಾದವು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು:– ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾದವು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

[ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು]

ಅಂಗೀಕಾರ ಪ್ರಸ್ತಾವ

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ. ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

3. ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ನ್ಯೂ ಬಾಲ್ಡ್‌ವಿನ್ ವಿಶ್ವವಿದ್ಯಾಲಯ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ